ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 8 ಸಂಚಿಕೆ 1 ಜನವರಿ 2023



ಶ್ರೀ ಸುತ್ತೂರು ಕ್ಷೇತ್ರದಲ್ಲಿ ದಿನಾಂಕ 22.12.2022 ರಂದು ನಡೆದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1063ನೆಯ ಜಯಂತಿ ಮಹೋತ್ಸವದ ಮೆರವಣಿಗೆಗೆ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ವಾಟಾಳು, ಹೊಸಮಠ, ಹರವೆ, ಚಿಕ್ಕತುಪ್ಪೂರು, ಮಾದಹಳ್ಳಿ, ಗಾವಡಗೆರೆ, ಹಾಲಹಳ್ಳಿ, ನೀಲಕಂಠಸ್ವಾಮಿಮಠ, ಸಾಲೂರುಮಠ, ಪಡಗೂರು, ರಾಗಿಬೊಮ್ಮನಹಳ್ಳಿ, ನಂಜನಗೂಡು ಶ್ರೀಗಳು, ಜನಪ್ರತಿನಿಧಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು ಹಾಗೂ ಇತರರಿದ್ದಾರೆ



ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 22.12.2022ರಂದು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1063ನೆಯ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ವಿವಿಧ ಪ್ರಶಸ್ತಿ ಪುರಸ್ಕೃತ ಗಣ್ಯರನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು



ಗುಂಡ್ಲುಪೇಟೆಯ ಜೆಎಸ್‌ಎಸ್ ಕಾಲೇಜಿನಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಜೆಎಸ್‌ಎಸ್ ರಂಗೋತ್ಸವದ ಉದ್ಘಾಟನೆಯಲ್ಲಿ ಮಾಜಿ ಸಚಿವರಾದ ಡಾ. ಗೀತಾ ಮಹದೇವಪ್ರಸಾದ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯರಾದ ಡಾ. ಹೆಚ್. ಬಸವನಗೌಡಪ್ಪ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್ ಮತ್ತಿತರರಿದ್ದಾರೆ

## ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರ 1063ನೆಯ ಜಯಂತಿ

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1063ನೆಯ ಜಯಂತಿ ಮಹೋತ್ಸವವು ದಿನಾಂಕ 22.12.2022ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಭಕ್ತಿ ಗೌರವಗಳಿಂದ ನೆರವೇರಿತು. ಆದಿಜಗದ್ಗುರುಗಳ ಉತ್ಸವಮೂರ್ತಿಯ ಮೆರವಣಿಗೆಯು ಶ್ರೀಮಠದ ಬಿರುದು ಬಾವಲಿಗಳು, ಮಂಗಳವಾದ್ಯ, ವೀರಗಾಸೆ, ಎನ್‌ಸಿಸಿ ಹಾಗೂ ಜನಪದ ಕಲಾ ತಂಡಗಳೊಂದಿಗೆ ಸುತ್ತೂರಿನ ಪ್ರಮುಖ ಬೀದಿಗಳಲ್ಲಿ ಸಾಗಿತು.

ಇದೇ ಸಂದರ್ಭದಲ್ಲಿ ಜ್ಯೋತಿಷ ಮಹಾ ಮಹೋಪಾಧ್ಯಾಯ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಸಿದ್ಧಪಡಿಸಿ, ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟಿಸಿರುವ ಶ್ರೀ ಶೋಭಕೃತು ನಾಮ ಸಂವತ್ಸರದ ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗ ಹಾಗೂ 2023ನೇ ಇಸವಿಯ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಗೋಡೆ ಹಾಗೂ ಪಾಕೆಟ್ ಕನ್ನಡ ಮತ್ತು ಇಂಗ್ಲಿಷ್ ದಿನಚರಿಗಳನ್ನು ಬಿಡುಗಡೆಗೊಳಿಸಲಾಯಿತು.

ವಿವಿಧ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಸೋಲಿಗರ ಮಾದಮ್ಮ, ಶ್ರೀ ಹೆಚ್.ಆರ್. ಶ್ರೀಶ, ಶ್ರೀ ಮದನ್ ಗೋಪಾಲ್, ಶ್ರೀ ಡಿ. ಮಾದೇಗೌಡ, ಪ್ರೊ. ಎಂ. ಕೃಷ್ಣೇಗೌಡ, ಡಾ. ಎಂ.ಜಿ. ನಾಗರಾಜ್, ಶ್ರೀ ಚಂದ್ರಶೇಖರ್ ನಾರಣಾಪುರ, ಗದಗ ಲಿಂಗಾಯತ ಪ್ರಗತಿಶೀಲ ಸಂಘ, ಮೈಸೂರಿನ ಶ್ರೀರಾಮಕೃಷ್ಣ ಆಶ್ರಮ, ಡಾ. ಸಿ.ಎನ್. ಮಂಜುನಾಥ್, ಡಾ. ವಸುಂಧರಾ ದೊರೆಸ್ವಾಮಿ, ಪಂ. ರವೀಂದ್ರ ಯಾವಗಲ್, ವಿದ್ವಾನ್ ಆರ್.ಕೆ. ಪದ್ಮನಾಭ, ಶ್ರೀಮತಿ ಎಚ್.ಆರ್. ಲೀಲಾವತಿ ಶ್ರೀ ವಿನಾಯಕ ತೊರವಿ, ಶ್ರೀ ಗುರುರಾಜ್, ಶ್ರೀ ಶಿವರುದ್ರಸ್ವಾಮಿ, ಡಾ. ಕಾ. ರಾಮೇಶ್ವರಪ್ಪ, ಡಾ. ಶಂಭು ವಿ. ಬಳಿಗಾರ, ಶ್ರೀ ವ.ನಂ. ಶಿವರಾಮು, ಪ್ರೊ. ಜಿ.ಎಂ. ಹೆಗಡೆ, ಶ್ರೀ ಎಸ್.ಎಚ್. ಸುಭಾಷ್, ಡಾ. ಬಾಬು ಕೃಷ್ಣಮೂರ್ತಿ, ಡಾ. ಅಮರನಾಥಗೌಡ, ಶ್ರೀ ವೀರಭದ್ರ ನಿಂಗಪ್ಪ ಮುಧೋಳ್, ಪ್ರೊ. ಮಲೆಯೂರು ಗುರುಸ್ವಾಮಿ, ಪ್ರೊ. ಕೆ. ರಾಮಮೂರ್ತಿರಾವ್‌ರವರನ್ನು ಸನ್ಮಾನಿಸಲಾಯಿತು.

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಸಿ.ಎನ್. ಮಂಜುನಾಥ್‌ರವರು ಮಾತನಾಡಿ ವಿವಿಧ ಕ್ಷೇತ್ರಗಳಲ್ಲಿ ಪ್ರಶಸ್ತಿ ಪುರಸ್ಕೃತರಾದವರಿಗೆ ಶ್ರೀಗಳು ಸನ್ಮಾನಿಸುತ್ತಿರುವುದು ಶ್ರೀಗಳವರ ಕಾಳಜಿ ಮತ್ತು ಸಂಸ್ಕಾರಕ್ಕೆ ಎತ್ತಿ ಹಿಡಿದ ಕನ್ನಡಿಯಾಗಿದೆ. ಸಾಧನೆ ಇಲ್ಲದೆ ಸತ್ತರೆ ಸಾವಿಗೆ ಅವಮಾನ. ಪ್ರಶಸ್ತಿ ಮತ್ತು ಪದವಿ ಪುರಸ್ಕಾರಗಳನ್ನು ಪಡೆದ ಮೇಲೆ ಸಾಧಕರಿಗೆ ಜವಾಬ್ದಾರಿಯು ಇನ್ನೂ ಹೆಚ್ಚಾಗುತ್ತದೆ ಎಂದರು.

ಪ್ರೊ. ಎಂ. ಕೃಷ್ಣೇಗೌಡರವರು ಮಾತನಾಡಿ ಸುತ್ತೂರು ಮಠವು ಗುರುಪರಂಪರೆಗೆ ಮಹತ್ವವನ್ನು ನೀಡುತ್ತಾ ಬರುತ್ತಿದೆ. ಗುರು ಶಿಷ್ಯರು ಒಬ್ಬರನ್ನೊಬ್ಬರ ಕೈಹಿಡಿದು ನಡೆದರೆ ಮಾತ್ರ ಸಾಧನೆಯತ್ತ ಸಾಗಲು ಸಾಧ್ಯ ಎಂದು ನುಡಿದರು. ಶ್ರೀರಾಮಕೃಷ್ಣ ಆಶ್ರಮದ ಮುಕ್ತಿದಾನಂದಜಿ ಮಹಾರಾಜ್, ವಿದ್ವಾನ್ ಆರ್.ಕೆ. ಪದ್ಮನಾಭ, ಡಾ. ಬಾಬು ಕೃಷ್ಣಮೂರ್ತಿ, ಶ್ರೀ ಹೆಚ್.ಆರ್. ಶ್ರೀಶ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲೆಯ ನೂರಕ್ಕೂ ಹೆಚ್ಚು ಮಠಾಧೀಶರು ಹಾಗೂ ಹರಗುರು ಚರಮೂರ್ತಿಗಳು, ಮಾಜಿ ಸಂಸದರಾದ ಶ್ರೀ ಆರ್. ಧ್ರುವನಾರಾಯಣ್, ಮಾಜಿ ಶಾಸಕರುಗಳಾದ ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಬಾಲರಾಜ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು, ಸಹಸ್ರಾರು ಭಕ್ತಾದಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಶ್ರೀ ನಿರಂಜನಮೂರ್ತಿ ನಿರೂಪಿಸಿ, ವಂದಿಸಿದರು.

□

## ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿವದೀಪೋತ್ಸವದ ಸಂಭ್ರಮ

ಶಿವದೀಪೋತ್ಸವದ ಅಂಗವಾಗಿ **ಶ್ರೀ ಸುತ್ತೂರು ಕ್ಷೇತ್ರದಲ್ಲಿ** ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ದಿನಾಂಕ 6.12.2022ರಂದು ವಿಶೇಷ ಪೂಜಾ ಕಾರ್ಯಕ್ರಮಗಳು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದವು.

ಶಿವದೀಪೋತ್ಸವ (ಕೃತ್ತಿಕಾ ಮಹೋತ್ಸವ)ದಲ್ಲಿ ಮಹಾಮಂಗಳಾರತಿ, ಬೆಳ್ಳಿರಥದ ಪ್ರಾಕಾರೋತ್ಸವ ನೆರವೇರಿತು. ಸುತ್ತೂರು ಶಾಲೆಯ ಮಕ್ಕಳ ಸಾಮೂಹಿಕ ಪ್ರಾರ್ಥನೆಯ ನಂತರ 2023 ಜನವರಿ 18 ರಿಂದ 23 ರವರೆಗೆ ನಡೆಯಲಿರುವ ಆದಿಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳವರ ಜಾತ್ರಾಮಹೋತ್ಸವದ ಪ್ರಸಾರ ರಥಕ್ಕೆ ಚಾಲನೆ ನೀಡಲಾಯಿತು. ಇದೇ ಸಂದರ್ಭದಲ್ಲಿ ಸಾಹಿತಿಗಳು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಎಂ. ಕೃಷ್ಣೇಗೌಡರವರು ಬೆಳಕಿನ ಉತ್ಸವ ಎಂಬ ವಿಷಯದ ಕುರಿತು ಉಪನ್ಯಾಸ ನೀಡುತ್ತಾ, ಮನುಷ್ಯನ ಇಂದ್ರಿಯಗಳು ಅವನ ಹತೋಟಿಯಲ್ಲಿರಬೇಕು, ಕಣ್ಣು ತೆರೆದರೆ ಸಾಲದು ಗಮನವಿಟ್ಟು ನೋಡಬೇಕು, ಕಿವಿ ತೆರೆದರೆ ಸಾಲದು ಕೇಳುವುದನ್ನು ಕಲಿಯಬೇಕು, ಒಳ್ಳೆಯದನ್ನು ಕಣ್ತುಂಬ ನೋಡಿ ಸಂತೋಷ ಪಡಬೇಕು, ನಾಲಿಗೆಯು ಯಾವುದು ಕೆಟ್ಟದ್ದು, ಯಾವುದು ಒಳ್ಳೆಯದು ಎಂದು ವಿಚಾರ ಮಾಡಿ ಎಚ್ಚರವಹಿಸಿ ಮಾತನಾಡಬೇಕು. ಮನುಷ್ಯನ ಮೆದುಳಿಗೆ ಅಗಾಧವಾದ ಶಕ್ತಿ ಇದೆ, ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಪ್ರತಿಯೊಬ್ಬ ಮನುಷ್ಯನಿಗೂ ಒಳಮನಸ್ಸಿರುತ್ತದೆ ಅದನ್ನು ಅರ್ಥಮಾಡಿಕೊಳ್ಳಬೇಕು. ಇಂದಿನ ದಿನಗಳಲ್ಲಿ ಮಕ್ಕಳು ಕುಳಿತಲ್ಲೇ ಪ್ರಪಂಚವನ್ನು ಮಾಧ್ಯಮಗಳ ಮೂಲಕ ನೋಡಬಹುದು. ಬೆಳಕು ಹಚ್ಚುವುದು ತುಂಬಾ ಕಷ್ಟ, ಬೆಂಕಿ ಹಚ್ಚುವುದು ಸುಲಭ. ಮಕ್ಕಳಲ್ಲಿರುವ ಜ್ಞಾನದ ಕಿಡಿಯನ್ನು ಹೊರತೆಗೆಯುವಂತಹ ಕೆಲಸವಾಗಬೇಕು. ಇಂದಿನ ಶಿಕ್ಷಕರು ಬರೀ ಪಾಠ ಪ್ರವಚನಗಳಿಗೆ ಸೀಮಿತವಾಗದೆ, ಅದರಿಂದಾಚೆಗೆ ವಿದ್ಯಾರ್ಥಿಗಳಿಗೆ ಪ್ರೇರಣಾತ್ಮಕವಾದ ಸಂಗತಿಗಳನ್ನು ಹೇಳಬೇಕು, ಪುಣ್ಯ ಕ್ಷೇತ್ರಗಳಿಗೆ ಬಂದಾಗ ಮನುಷ್ಯ ಭಕ್ತಿಯಿಂದ ಇರುತ್ತಾನೆ. ಆದ್ದರಿಂದ ದೇವಾಲಯಗಳಿಗೆ ತೆರಳುವುದರ ಮೂಲಕ ನೆಮ್ಮದಿಯನ್ನು ಕಾಣಬಹುದು ಎಂದು ಕಥೆಗಳು ಮತ್ತು ಹಾಸ್ಯ ಚಟಾಕಿಗಳ ಮೂಲಕ ಮಕ್ಕಳಿಗೆ ತಿಳಿಸಿದರು.

ಶಿವದೀಪೋತ್ಸವದ ಅಂಗವಾಗಿ ದೇವಾಲಯಗಳಿಗೆ ಮಾಡಿದ್ದ ವಿಶೇಷ ದೀಪಾಲಂಕಾರ ನೆರೆದಿದ್ದ ಸಹಸ್ರಾರು ಭಕ್ತಾದಿಗಳ ಮನಕ್ಕೆ ಮುದ ನೀಡಿದರೆ, ಬಾಣ ಬಿರುಸುಗಳ ಪ್ರದರ್ಶನ ಹರ್ಷೋಲ್ಲಾಸ ಉಂಟುಮಾಡಿತು. ಕಾರ್ಯಕ್ರಮದಲ್ಲಿ ಹೊಸಮಠ, ಹುಲಿಯೂರುದುರ್ಗ, ಚಿಕ್ಕತುಪ್ಪೂರು, ಚುಂಚನಹಳ್ಳಿ, ಹಾಡ್ಯ, ಹೊನ್ನಲಗೆರೆ, ಕಳ್ಳಿಪುರ, ಮಾದಹಳ್ಳಿ, ಮಾಡ್ರಳ್ಳಿ, ಹಲ್ಲರೆ, ಬೆನಕನಹಳ್ಳಿ ಭಿಕ್ಷದ ಮಠ, ರಾಗಿಬೊಮ್ಮನಹಳ್ಳಿ, ಹೆಡಿಯಾಲ, ಆಲತ್ತೂರು, ಮಾದಾಪುರ ಮೊದಲಾದ ಮಠಗಳ ಶ್ರೀಗಳು, ಹರಗುರು ಚರಮೂರ್ತಿಗಳು, ಡಾ. ಪದ್ಮಾಶೇಖರ್, ಪ್ರೊ. ಶಿವರಾಜಪ್ಪ, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಪ್ರೊ. ಶಿವರಾಜಪ್ಪ, ಗಣ್ಯರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಹಸ್ರಾರು ಭಕ್ತಾದಿಗಳು ಭಾಗವಹಿಸಿದ್ದರು.

ಗುಣನಿಧಿ
ಜ್ಞಾನನಿಧಿ
ಅಧ್ಯಾತ್ಮ ನಿಧಿ
ಶಿಕ್ಷಣ ನಿಧಿ
ಬಡವರ ನಿಧಿ
ಕರ್ನಾಟಕದ ನಿಧಿ
ಕನ್ನಡದ ನಿಧಿ
ಯತ್ಯಾಶ್ರಮ ನಿಧಿ
ಸಂಗೀತ ಸೇವಾನಿಧಿ
'ವಿಶ್ವಕ್ಕೇ ನಿಧಿ'
ಪೂಜ್ಯ ದೇಶಿಕೇಂದ್ರ ಶ್ರೀಗಳಿಗೆ
ಸಂಗೀತ ಸೇವಕ ಪದ್ಮನಾಭ ದಾಸನಾಗಿ
ಶಿರಬಾಗಿ ಗಾನ ನಮನ ಸಲ್ಲಿಪೆನು

**– ಆರ್.ಕೆ. ಪದ್ಮನಾಭ**

## ಸುತ್ತೂರು ಶ್ರೀಮಠದ ಸೇವೆ ಪಡೆಯುತ್ತಿರುವುದು ನಮ್ಮ ಸೌಭಾಗ್ಯ




ಗುಂಡ್ಲುಪೇಟೆಯ ಜೆಎಸ್‌ಎಸ್ ಕಾಲೇಜಿನಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಜೆಎಸ್‌ಎಸ್ ರಂಗೋತ್ಸವ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್‌ರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಡಾ. ಸಿ.ಪಿ. ಮಧು, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯರಾದ ಡಾ. ಹೆಚ್. ಬಸವನಗೌಡಪ್ಪ, ರಂಗಕರ್ಮಿ ಶ್ರೀ ವೈ.ಎಂ. ಪುಟ್ಟಣಯ್ಯ, ಮಾಜಿ ಸಚಿವರಾದ ಡಾ. ಗೀತಾ ಮಹದೇವಪ್ರಸಾದ್, ಶಾಸಕರಾದ ಶ್ರೀ ಸಿ.ಎಸ್. ನಿರಂಜನಮೂರ್ತಿ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ವಿಭಾಗದ ನಿರ್ದೇಶಕರಾದ ಶ್ರೀ ಎನ್. ಮಹೇಶ್ ಇದ್ದಾರೆ

ಸುತ್ತೂರು ಶ್ರೀಮಠವು ಜನಸಾಮಾನ್ಯರಿಗೆ ಹಲವು ರಂಗಗಳಲ್ಲಿ ಸೇವೆಗಳನ್ನು ಒದಗಿಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ಶಾಸಕರಾದ ಶ್ರೀ ಸಿ.ಎಸ್. ನಿರಂಜನ್ ಕುಮಾರ್‌ರವರು ಹೇಳಿದರು.

**ಗುಂಡ್ಲುಪೇಟೆಯ ಜೆಎಸ್‌ಎಸ್ ಕಾಲೇಜಿನಲ್ಲಿ** ದಿನಾಂಕ 19.12.2022ರಂದು ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಜೆಎಸ್‌ಎಸ್ ರಂಗೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಅತ್ಯಂತ ದೊಡ್ಡ ಪ್ರಮಾಣದ ಸುಸಜ್ಜಿತ ಆಸ್ಪತ್ರೆಯಾಗಿದ್ದು ರೋಗಿಗಳನ್ನು ಗುಣಪಡಿಸುವಲ್ಲಿ ಮಂಚೂಣಿಯಲ್ಲಿದೆ. ಕೋವಿಡ್ – 19ರಂತಹ ಮಹಾಮಾರಿ ಸಂದರ್ಭದಲ್ಲಿ ಈ ಆಸ್ಪತ್ರೆಯಿಂದ ಬಹುತೇಕ ಹಿರಿಯರು, ಮಕ್ಕಳು, ತರುಣರು ಅಧಿಕಾರಿಗಳು, ರಾಜಕಾರಣಿಗಳು ಗುಣಮುಖರಾಗಿ ಪುನರ್ಜನ್ಮ ಪಡೆದವರಂತೆ ತಮ್ಮ ಧನ್ಯತೆಗಳನ್ನು ಅರ್ಪಿಸಿದ್ದಾರೆ. ಚಾಮರಾಜನಗರದಲ್ಲಿಯೂ ಸುತ್ತೂರು ಶ್ರೀಗಳವರು ಜನಸಾಮಾನ್ಯರಿಗೆ ಉಪಯೋಗವಾಗುವಂತೆ ಆಸ್ಪತ್ರೆ ಆರಂಭಿಸಿರುವುದು ನಮ್ಮ ಭಾಗದ ಬಡಜನತೆಗೆ ತುಂಬ ಅನುಕೂಲವಾಗಿದೆ ಎಂದು ನುಡಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್‌ರವರು ನಾವು ದೈಹಿಕ ಮತ್ತು ಮಾನಸಿಕ ಆರೋಗ್ಯಗಳ ರಕ್ಷಣೆಗಳತ್ತ ಗಮನಕೊಡಬೇಕಿದೆ. ಜೆಎಸ್‌ಎಸ್ ಆಸ್ಪತ್ರೆಯು ಭಾರತ ಸರಕಾರ ಮತ್ತು ವಿಶ್ವದ ಉನ್ನತ ವೈದ್ಯಕೀಯ ಸಂಸ್ಥೆಗಳು

ನೀಡುವ ಗೌರವಾದರಗಳಿಗೆ ಪಾತ್ರವಾಗಿದೆ. ಇಲ್ಲಿ ಉತ್ಕೃಷ್ಟ ದರ್ಜೆಯ ಚಿಕಿತ್ಸಾ ಸೌಲಭ್ಯಗಳಿವೆ. ಕೋವಿಡ್-19 ರ ಲಸಿಕೆಯನ್ನು ಭಾರತ ಸರ್ಕಾರವು ಜನರಿಗೆ ನೀಡುವ ಮೊದಲು, ಪರೀಕ್ಷೆಯನ್ನು ಪ್ರಯೋಗಾರ್ಥ ನಡೆಸುವಲ್ಲಿ ಆಸ್ಪತ್ರೆ ತೊಡಗಿತ್ತು. ವೆಂಟಿಲೇಟರ್‌ಗಳ ಕೊರತೆ ಆಗದಂತೆ ನೋಡಿಕೊಳ್ಳುವಲ್ಲಿ ಆಸ್ಪತ್ರೆ ಅತ್ಯಂತ ಮುತುವರ್ಜಿಯಿಂದ ಜನರ ಸೇವೆ ಮಾಡಿಕೊಂಡು ಬಂದಿದೆ. ರಂಗೋತ್ಸವವು ಕಲಾಭಿರುಚಿಯ ಮೂಲಕ ಸಾಂಸ್ಕೃತಿಕ ಅಭಿರುಚಿಯನ್ನು ನಮ್ಮಲ್ಲಿ ಬೆಳೆಸುತ್ತದೆ. ರಂಗೋತ್ಸವ ಪ್ರದರ್ಶನವನ್ನು ಇದೇ ಮೊದಲ ಬಾರಿಗೆ ಗುಂಡ್ಲುಪೇಟೆಗೆ ವಿಸ್ತರಿಸಿದ್ದು ಜನತೆಯ ಅಭಿಮಾನ ಹರ್ಷವನ್ನುಂಟು ಮಾಡಿದೆ ಎಂದರು.

ರಂಗೋತ್ಸವವನ್ನು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಂಗಕರ್ಮಿಗಳಾದ ಶ್ರೀ ವೈ.ಎಂ. ಪುಟ್ಟಣಯ್ಯ ಡೋಲು ಬಾರಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ಮಾಜಿ ಸಚಿವರಾದ ಡಾ. ಗೀತಾ ಮಹದೇವಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯರಾದ ಡಾ. ಹೆಚ್. ಬಸವನಗೌಡಪ್ಪ ಸ್ವಾಗತ ಕೋರಿದರು. ರಂಗೋತ್ಸವದ ಸಂಚಾಲಕರಾದ ಶ್ರೀ ಚಂದ್ರಶೇಖರ ಹೆಗ್ಗೋಠಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕು. ಪ್ರಿಯಾಂಕ ಮತ್ತು ತಂಡದವರು ಪ್ರಾರ್ಥನೆ ಸಲ್ಲಿಸಿದರು. ಪದವಿ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಮರಿಸ್ವಾಮಪ್ಪ ವಂದಿಸಿದರು. ಶ್ರೀ ಸಿದ್ಧಮಲ್ಲಿಕಾರ್ಜುನ ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ನಂತರ ಹಲಗಲಿ ಬೇಡರು ನಾಟಕ ಪ್ರದರ್ಶನಗೊಂಡಿತು. □

## ಜೆಎಸ್‌ಎಸ್ ಆಸ್ಪತ್ರೆ : ಸಾವಿನಲ್ಲೂ ಸಾರ್ಥಕತೆ ಮೆರೆದ ಶ್ರೀ ಎಸ್.ಎ. ಸಚಿನ್



ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಸಿಂಗಪುರ ಗ್ರಾಮದ 21 ವರ್ಷದ ಶ್ರೀ ಎಸ್.ಎ. ಸಚಿನ್‌ರವರು ದಿನಾಂಕ 28.11.2022 ರಂದು ರಸ್ತೆ ಅಪಘಾತಕ್ಕಿಡಾಗಿ ಮೆದುಳಿನ ತೀವ್ರ ರಕ್ತಸ್ರಾವದಿಂದ **ಜೆಎಸ್‌ಎಸ್ ಆಸ್ಪತ್ರೆಗೆ** ದಾಖಲಾಗಿದ್ದರು. ಚಿಕಿತ್ಸೆ ನೀಡಿದ ವೈದ್ಯರು ರೋಗಿಯ ಮೆದುಳು ನಿಷ್ಕ್ರಿಯಗೊಂಡಿರುವ ಬಗ್ಗೆ ಮತ್ತು ಬದುಕುಳಿಯುವ ಸಾಧ್ಯತೆ ಬಗ್ಗೆ ರೋಗಿಯ ಪೋಷಕರಿಗೆ ವಿವರಿಸಿದರು. ದುಃಖದ ಸಂದರ್ಭದಲ್ಲಿಯೂ ಅವರ ಕುಟುಂಬ ಸದಸ್ಯರು ಅಂಗಾಂಗ ದಾನ ಮಾಡಲು ನಿರ್ಧರಿಸಿ ಮುಂದಿನ ಕ್ರಮ ಕೈಗೊಳ್ಳಲು ಕೋರಿದರು. ನಿಯಮಾನುಸಾರ ಆಸ್ಪತ್ರೆಯ ವೈದ್ಯರು ರೋಗಿಯ ಮೆದುಳು ನಿಷ್ಕ್ರಿಯವಾಗಿದೆಯೆಂದು 29.11.2022ರಂದು ಘೋಷಣೆ ಮಾಡಿದರು.

ವೈದ್ಯರ ತಂಡ ರೋಗಿಯ ಹೃದಯ, ಎರಡು ಕಾರ್ನಿಯಾ (ಕಣ್ಣುಗಳು), ಎರಡು ಕಿಡ್ನಿ ಮತ್ತು ಲಿವರ್ ಕೊಯ್ಲು ಮಾಡಿ ಅವಶ್ಯಕತೆಯಿದ್ದ ರೋಗಿಗಳಿಗೆ ಕಸಿಮಾಡಲು ಹೃದಯವನ್ನು ಬೆಂಗಳೂರಿನ ವೈದೇಹಿ ಆಸ್ಪತ್ರೆಗೆ ಮತ್ತು ಒಂದು ಕಿಡ್ನಿ ಹಾಗೂ ಲಿವರ್ ಅನ್ನು ಬಿಜಿಎಸ್ ಗ್ಲೋಬಲ್ ಆಸ್ಪತ್ರೆಗೆ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಗ್ರೀನ್ ಕಾರಿಡಾರ್ ಮುಖಾಂತರ ರವಾನಿಸಲಾಯಿತು. ಕಾರ್ನಿಯಾಗಳನ್ನು ಬೆಂಗಳೂರಿನ ಲಯನ್ಸ್ ಆಸ್ಪತ್ರೆಗೆ ರವಾನಿಸಲಾಯಿತು.

ಅಂಗಾಂಗ ದಾನ ಮಾಡಲು ಶ್ಲಾಘನೀಯ ನಿರ್ಧಾರ ತೆಗೆದುಕೊಂಡ ಶ್ರೀ ಎಸ್.ಎ. ಸಚಿನ್ ಕುಟುಂಬ ಸದಸ್ಯರಿಗೆ ಜೆಎಸ್‌ಎಸ್ ಆಸ್ಪತ್ರೆ ಮತ್ತು ಆಡಳಿತ ಮಂಡಳಿ ವತಿಯಿಂದ ಧನ್ಯವಾದಗಳನ್ನು ಅರ್ಪಿಸಲಾಯಿತು. □

# ರಸಾಯನಶಾಸ್ತ್ರ ಪ್ರಯೋಗಗಳ ಪ್ರಾತ್ಯಕ್ಷಿಕೆ



ಮೈಸೂರಿನ ಭ್ರಮರಾ ಟ್ರಸ್ಟ್ ಸಹಯೋಗದಲ್ಲಿ ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯಲ್ಲಿ ರಸಾಯನಶಾಸ್ತ್ರ ಪ್ರಯೋಗಗಳ ಪ್ರಾತ್ಯಕ್ಷಿಕೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರು ಉದ್ಘಾಟಿಸಿದರು. ಚಿತ್ರದಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಶ್ರೀ ಉದಯ ಮೈತ್ರ, ಶ್ರೀಮತಿ ಸಮಿತಾ ಮೈತ್ರಾ, ಶ್ರೀಮತಿ ಮಾಧುರಿ ತಾತಾಚಾರಿ, ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಇತರರನ್ನು ಕಾಣಬಹುದು.

ಮೈಸೂರಿನ ಭ್ರಮರಾ ಟ್ರಸ್ಟ್ ಸಹಯೊಗದಲ್ಲಿ **ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯಲ್ಲಿ** ರಸಾಯನಶಾಸ್ತ್ರ ಪ್ರಯೋಗಗಳ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ, ಪ್ರತಿಯೊಬ್ಬ ವಿದ್ಯಾರ್ಥಿ ತರಗತಿಯಲ್ಲಿ ಹೆಚ್ಚಿನ ವಿಷಯವನ್ನು ಕಲಿಯಲು ಪ್ರಶ್ನಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಉದಯ ಮೈತ್ರ, ಸಮಿತಾ ಮೈತ್ರಾರವರು ಎಲಿಫೆಂಟ್ ಟೂತ್‌ಪೇಸ್ಟ್, ಕೆಮಿಲ್ಯೂಮಿನಿಸೆನ್ಸ್, ಥರ್ಮೋಕ್ರೋಮಿಸಂ, ಘನ ಕಾರ್ಬನ್ ಡೈಆಕ್ಸೈಡ್‌ನಿಂದ ಮ್ಯಾಗ್ನಿಷಿಯಂ ಅಕ್ಸಿಜನ್‌ಅನ್ನು ಅಪಕರ್ಷಿಸಿ ಹೊತ್ತಿ ಉರಿಯುವಿಕೆ, ಡ್ಯುಟೇರಿಯಂ (ಭಾರಜಲ) ನೀರಿಗಿಂತ ಭಾರವಾಗಿದೆ ಎಂದು ತೋರಿಸುವ ಪ್ರಯೋಗ, ನೀರಿನ ಅಸಂಬದ್ಧ ವಿಕಾಸ ಹೀಗೆ ಹಲವಾರು ಪ್ರಾತ್ಯಕ್ಷಿಕೆಯನ್ನು ವಿದ್ಯಾರ್ಥಿಗಳಿಗೆ ತೋರಿಸಿಕೊಟ್ಟರು.

ಶ್ರೀಮತಿ ಮಾಧುರಿ ತಾತಾಚಾರಿಯವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ, ಮುಖ್ಯೋಪಾಧ್ಯಾರುಗಳಾದ ಶ್ರೀ ಜಿ. ಶಿವಮಲ್ಲು, ಶ್ರೀ ಎಂ.ಜಿ. ಬಸವಣ್ಣ, ಶ್ರೀಮತಿ ಸಿ.ಪಿ. ನಿರ್ಮಲ ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

## ಕೆಂಪು ಅಕ್ಕಿ ಭತ್ತದ ತಳಿ–ಕೆಎಂಪಿ 220: ಕ್ಷೇತ್ರೋತ್ಸವ



**ಸುತ್ತೂರು ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ,** ಕೃಷಿ ಇಲಾಖೆಯ ಸಹಯೋಗದಲ್ಲಿ ಟಿ. ನರಸೀಪುರ ತಾಲ್ಲೂಕಿನ ಡಣಾಯಕನಪುರ ಗ್ರಾಮದಲ್ಲಿ ಕೆಂಪು ಭತ್ತದ ಹೊಸ ತಳಿ ಕೆಎಂಪಿ–220 ಬೆಳೆಯ ಕ್ಷೇತ್ರೋತ್ಸವವನ್ನು ವಾಟಾಳು ಶ್ರೀ ಸೂರ್ಯಸಿಂಹಾಸನ ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಜೆಎಸ್‌ಎಸ್ ಕೆವಿಕೆಯು ರೈತರಿಗೆ ಅವಶ್ಯಕತೆಯಿರುವ ಹೊಸ ಉತ್ತಮವಾದ ತಳಿಗಳನ್ನು ಪರಿಚಯಿಸಿ, ತರಬೇತಿ ಮುಖಾಂತರ ಹೆಚ್ಚು ಇಳುವರಿ ಪಡೆಯಲು ಮಾರ್ಗದರ್ಶನ ನೀಡಿ, ರೈತರು ಉತ್ತಮ ಇಳುವರಿ ಪಡೆಯಲು ಶ್ರಮಿಸುತ್ತಿದೆ. ಕೆವಿಕೆ ವಿಜ್ಞಾನಿಗಳು ಹಾಗು ರೈತರ ಒಡನಾಟ ಉತ್ತಮವಾಗಿದೆ ಎಂದು ಕೆವಿಕೆಯ ಕಾರ್ಯವೈಖರಿಯನ್ನು ಶ್ರೀಗಳು ಶ್ಲಾಘಿಸಿದರು.

ಕೆವಿಕೆಯ ಪ್ರಭಾರ ಹಿರಿಯ ವಿಜ್ಞಾನಿ ಹಾಗು ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾರವರು ಮಾತನಾಡಿ, ಈ ಭಾಗದ ರೈತರು ಜ್ಯೋತಿ ಭತ್ತವನ್ನು ಹೆಚ್ಚಾಗಿ ಬೆಳೆಯುತ್ತಿದ್ದು, ಆ ತಳಿಗೆ ರೋಗ ಹೆಚ್ಚಾಗಿದ್ದು, ಕಡಿಮೆ ಇಳುವರಿ ನೀಡುತ್ತದೆ. ಈ ತಳಿಗೆ ಪರ್ಯಾಯವಾಗಿ ಉತ್ತಮ ತಳಿಯ ನಿರೀಕ್ಷೆಯಲ್ಲಿದ್ದರು. ಕೃಷಿ ವಿಶ್ವವಿದ್ಯಾಲಯ ಬೆಂಗಳೂರಿನಿಂದ ಜ್ಯೋತಿ ತಳಿಯ ಪರ್ಯಾಯ ತಳಿಯಾಗಿ ಕೆಎಂಪಿ 220 ತಳಿಯನ್ನು ಬಿಡುಗಡೆ ಮಾಡಿದ್ದು, ಪ್ರಾಯೋಗಿಕವಾಗಿ ಕೆವಿಕೆಯಿಂದ ಆಯ್ದ 10 ರೈತರಿಗೆ ನೀಡಲಾಗಿತ್ತು. ಈ ತಳಿಯು ಜ್ಯೋತಿ ತಳಿಗಿಂತ ಹೆಚ್ಚು ಹುಲ್ಲು, ಇಳುವರಿ ನೀಡಲಿದ್ದು, ಕಡಿಮೆ ರೋಗಕ್ಕೆ ತುತ್ತಾಗುವುದರಿಂದ, ರೈತರಿಗೆ ಖರ್ಚು ಕಡಿಮೆಯಾಗಿ ಉತ್ತಮ ಲಾಭವಾಗುತ್ತದೆ ಎಂದು ತಿಳಿಸಿದರು. ರೈತರು ಉತ್ತಮ ಗಿಡಗಳಿಂದ ತೆನೆಗಳನ್ನು ಆಯ್ಕೆ ಮಾಡಿ ಮುಂದಿನ ಬಿತ್ತನೆಗೆ ಬೀಜವನ್ನು ಬಳಸಿಕೊಳ್ಳಲು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಬಿಐ ಆರ್ಥಿಕ ಸಾಕ್ಷರತಾ ತಜ್ಞರಾದ ಶ್ರೀ ವೆಂಕಟೇಶ್ ಬ್ಯಾಂಕಿನ ವಿವಿಧ ಸೌಲಭ್ಯಗಳು ಮತ್ತು ವಿಮೆಗಳ ಬಗ್ಗೆ ತಿಳಿಸಿಕೊಟ್ಟರು. ಕಾರ್ಯಕ್ರಮವನ್ನು ಆತ್ಮಾ ಯೋಜನೆಯ ಶ್ರೀ ಶಿವಣ್ಣ ನಿರೂಪಿಸಿದರು, ಕೃಷಿ ಅಧಿಕಾರಿ ಶ್ರೀಮತಿ ವಿಜಯಲಕ್ಷ್ಮಿ, ಪ್ರಗತಿಪರ ರೈತರಾದ ಶ್ರೀ ಚಿನ್ನಬುದ್ಧಿ, ಶ್ರೀ ಪುಟ್ಟಣ್ಣ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ರೈತರು ಭಾಗವಹಿಸಿ, ಕ್ಷೇತ್ರ ಭೇಟಿ ನೀಡಿ ಅಭಿಪ್ರಾಯ ಹಂಚಿಕೊಂಡರು. ಹೊಸ ತಳಿಯ ಕಾಳು ಜ್ಯೋತಿ ತಳಿಯಂತಿದ್ದು, ಸ್ವಲ್ಪ ಸಣ್ಣಗಿದೆ, ಗಿಡದ ಎತ್ತರ ಸ್ವಲ್ಪ ಕಡಿಮೆಯಿರಬೇಕು, ಈ ತಳಿಯು ಉತ್ತಮ ಕಾಳು ಹಾಗು ಹುಲ್ಲಿನ ಇಳುವರಿ ನೀಡುತ್ತದೆಂದು ಸಂತಸ ವ್ಯಕ್ತಪಡಿಸಿದರು.

## ಮಣ್ಣು ಆಹಾರದ ಮೂಲ, ಮಣ್ಣಿನ ಫಲವತ್ತತೆಯನ್ನು ಕಾಪಾಡಿ



ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಮಣ್ಣು ದಿನಾಚರಣೆಯನ್ನು ಉದ್ಘಾಟಿಸಲಾಯಿತು

ಮಣ್ಣು ಆಹಾರದ ಮೂಲವಾಗಿದ್ದು, ಮಣ್ಣಿನ ಫಲವತ್ತತೆಯನ್ನು ಕಾಪಾಡಬೇಕು ಎಂದು ಕೃಷಿ ತಂತ್ರಜ್ಞರ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ನಿವೃತ್ತ ಜಂಟಿ ಕೃಷಿ ನಿರ್ದೇಶಕರಾದ ಡಾ. ಎಂ. ಮಹಂತೇಶಪ್ಪರವರು ಹೇಳಿದರು.

**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ** ಆಯೋಜಿಸಿದ್ದ ವಿಶ್ವ ಮಣ್ಣು ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕೃಷಿಯಲ್ಲಿ ಮಹಿಳೆ ದಿನಾಚರಣೆಯ ಅಂಗವಾಗಿ ಕೃಷಿ ಮಹಿಳೆಯರು ರೈತ ಉತ್ಪಾದಕ ಸಂಘಗಳನ್ನು ಸ್ಥಾಪಿಸಿಕೊಂಡು, ಸರ್ಕಾರದ ಸಹಾಯಧನದೊಂದಿಗೆ ತಮ್ಮ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆಯನ್ನು ಕಲ್ಪಿಸಿಕೊಳ್ಳಲು ಕರೆನೀಡಿದರು.

ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀಮತಿ ಮಂಗಳಾ ಸೋಮಶೇಖರ್‌ರವರು ಮಾತನಾಡಿ ಕೃಷಿಯಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ತೊಡಗಿಸಿಕೊಂಡಿದ್ದಾರೆ. ಇಂತಹ ಕೃಷಿ ಮಹಿಳೆಯರು ಹೆಚ್ಚು ಸಂಘಟಿತರಾಗಿ ಕೃಷಿಯಲ್ಲದೇ, ಕೃಷಿಯೇತರ ಚಟುವಟಿಕೆಗಳನ್ನು ಹಮ್ಮಿಕೊಂಡು ಆರ್ಥಿಕವಾಗಿ ಸದೃಢರಾಗುವಂತೆ ಹೇಳಿದರು.

ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀ ಎ.ಎಸ್. ಗುರುಸ್ವಾಮಿಯವರು ಮಾತನಾಡಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಸಾಕ್ಷರರಾಗಿ ಕೃಷಿಯಲ್ಲಿ ಹೆಚ್ಚು ಆಸಕ್ತಿ ತೋರುತ್ತಿರುವುದು ಉತ್ತಮ ಬೆಳವಣಿಗೆ. ಹೆಚ್ಚಿನ ಮಹಿಳೆಯರು ಕೃಷಿ ಯಂತ್ರೋಪಕರಣಗಳನ್ನು ಸಹ ಉಪಯೋಗಿಸುತ್ತಿದ್ದಾರೆ. ಇದರ ಜೊತೆಗೆ ಸಾವಯವ ಕೃಷಿಗೆ ಹೆಚ್ಚು ಮಹತ್ವವನ್ನು ನೀಡಬೇಕೆಂದು ತಿಳಿಸಿದರು.

ಕೃಷಿ ಇಲಾಖೆಯ ನಂಜನಗೂಡಿನ ಸಹಾಯಕ ನಿರ್ದೇಶಕರಾದ ಡಾ. ಬಿ.ಎಸ್. ದೀಪಕ್ ಕೃಷಿ ಇಲಾಖೆಯಿಂದ ರೈತರಿಗೆ ಸಿಗುವ ವಿವಿಧ ಸಹಾಯಧನ ಹಾಗೂ ಕೃಷಿ ಪ್ರಶಸ್ತಿಗಳ ಕುರಿತು ಮಾಹಿತಿ ನೀಡಿದರು. ಕೆವಿಕೆಯ ಪ್ರಭಾರ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮಣ್ಣು ವಿಜ್ಞಾನಿಯಾದ ಶ್ರೀ ಜೆ.ಜಿ. ರಾಜಣ್ಣ ಮಣ್ಣಿನ ಪೋಷಕಾಂಶಗಳ ಮಹತ್ವ ಹಾಗೂ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಶ್ರೀ ವೆಂಕಟೇಶ್ ಕೃಷಿ ಮಹಿಳೆಯರಿಗೆ ಬ್ಯಾಂಕ್‌ನಲ್ಲಿ ಸಿಗುವ ಸಾಲಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ರೈತರಿಗೆ ಮಣ್ಣು ಪರೀಕ್ಷಾ ಪತ್ರವನ್ನು ವಿತರಿಸಲಾಯಿತು ಹಾಗೂ ಕೆವಿಕೆಯಲ್ಲಿ ಕೆಲಸ ಮಾಡುವ ಎಲ್ಲಾ 20 ರೈತಮಹಿಳೆಯರ ಕೆಲಸವನ್ನು ಅಭಿನಂದಿಸಿ, ಗೌರವಿಸಲಾಯಿತು. ಶ್ರೀ ಜೆ.ಜಿ. ರಾಜಣ್ಣ ಸ್ವಾಗತಿಸಿದರು. ಡಾ. ಜಿ.ಎಂ. ವಿನಯ್ ವಂದಿಸಿದರು. ಡಾ. ಯು.ಎಂ. ರಕ್ಷಿತ್ ರಾಜ್‌ರವರು ಕಾರ್ಯಕ್ರಮ ನಿರೂಪಿಸಿದರು.

# ಸುತ್ತೂರು ಕೆವಿಕೆಯಲ್ಲಿ ರೈತ ದಿನಾಚರಣೆ



ಸುತ್ತೂರು ಕೆವಿಕೆಯಲ್ಲಿ ರೈತ ದಿನಾಚರಣೆಯಂದು ಪ್ರಗತಿಪರ ರೈತರುಗಳನ್ನು ಸನ್ಮಾನಿಸಲಾಯಿತು

**ಸುತ್ತೂರು ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ** ಮೈಸೂರಿನ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ ಕಾವೇರಿ ಜಲಾನಯನ ಯೋಜನೆಗಳು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಹಾಗೂ ಹಾಸನದ ಮಂಗಳೂರು ಕೆಮಿಕಲ್ಸ್ ಆಂಡ್ ಫರ್ಟಿಲೈರಸ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ರೈತ ದಿನಾಚರಣೆಯನ್ನು ದಿನಾಂಕ 23.12.2022ರಂದು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮೈಸೂರಿನ ಕಾಡಾ ಜಂಟಿ ನಿರ್ದೇಶಕರಾದ ಶ್ರೀಮತಿ ಹೆಚ್.ಟಿ. ಚಂದ್ರಕಲಾರವರು ಮಾತನಾಡಿ ರೈತರು ಒಂದೇ ಬೆಳೆಯನ್ನು ನೆಚ್ಚಿಕೊಂಡು ಸಾಗುವಳಿ ಮಾಡದೆ ಸಮಗ್ರ ಕೃಷಿಯನ್ನು ಅಳವಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕೆಂದು ತಿಳಿಸಿದರು.

ಮೈಸೂರಿನ ಪಶುಪಾಲನ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕರಾದ ಡಾ. ಬಿ.ಎನ್. ಷಡಕ್ಷರಮೂರ್ತಿಯವರು ಮಾತನಾಡಿ ರೈತರಿಗೆ ಪಶುಸಂಗೋಪನೆ ಅವಿಭಾಜ್ಯ ಅಂಗವಾಗಿದೆ. ಜಾನುವಾರುಗಳಿಲ್ಲದೇ ರೈತರನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಕೃಷಿಯೊಂದಿಗೆ ಜಾನುವಾರುಗಳ ಪಾಲನೆಗೆ ರೈತರು ವಿಶೇಷ ಆಸಕ್ತಿಯನ್ನು ವಹಿಸಲು ಕರೆ ನೀಡಿದರು. ಜಾನುವಾರು ಸಾಕುವ ಜಾಗವನ್ನು ಸ್ವಚ್ಛತೆಯಿಂದ ನೋಡಿಕೊಂಡರೆ ರೋಗ–ರುಜನೆಯನ್ನು ತಡೆಗಟ್ಟಬಹುದಾಗಿದೆ ಎಂದು ತಿಳಿಸಿದರು. ನಂಜನಗೂಡು ತಾಲ್ಲೂಕಿನ ತುಮ್ಮನೇರಳೆ ಗ್ರಾಮದಲ್ಲಿ 340ಕ್ಕೂ ಹೆಚ್ಚು ರಾಸುಗಳಿಗೆ ಬರಡು ರಾಸು ಚಿಕಿತ್ಸೆ ಮತ್ತು ಇತರೆ ಕಾಯಿಲೆಗಳಿಗೆ ಆರೋಗ್ಯ ತಪಾಸಣೆ ನಡೆಸಿ ಉಚಿತವಾಗಿ ಔಷಧಿಯನ್ನು ನೀಡಲಾಗಿದೆ ಎಂದು ತಿಳಿಸಿದರು.

ಹಾಸನದ ಮಂಗಳೂರು ಕೆಮಿಕಲ್ಸ್ ಆಂಡ್ ಫರ್ಟಿಲೈರಸ್‌ನ ಮುಖ್ಯ ಮಾರಾಟ ಅಧಿಕಾರಿಯಾದ ಶ್ರೀ ಓಂಕಾರಮೂರ್ತಿ, ಮೈಸೂರಿನ ರೋಟರಿ ಶ್ರೀಗಂಧ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎನ್.ವೈ. ಚಿಗಾರಿಯವರು ಮಾತನಾಡಿದರು. ಪ್ರಭಾರ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾ ಅಧ್ಯಕ್ಷತೆ ವಹಿಸಿದ್ದರು. ಕಬ್ಬು ಮಹಾಮಂಡಳಿಯ ಸದ್ಯಸರಾದ ಶ್ರೀ ಎಸ್. ಮಹದೇವು, ತೋಟಗಾರಿಕೆ ಉಪನಿರ್ದೇಶಕರಾದ ಶ್ರೀ ನಾಗರಾಜಪ್ಪ, ಪಶುವೈದ್ಯಾಧಿಕಾರಿಗಳಾದ ಡಾ. ನಿಖಿತ್‌ರವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಹುಣಸೂರು ತಾಲ್ಲೂಕಿನ ಹುಲ್ಯಾಳು ಗ್ರಾಮದ ಶ್ರೀ ನಾರಾಯಣರಾವ್ ಶಿಂಧೆ ಹಾಗೂ ಟಿ. ನರಸೀಪುರ ತಾಲ್ಲೂಕಿನ ಡಣಾಯಕನಪುರದ ಶ್ರೀ ಚಿನ್ನಬುದ್ಧಿ ಹಾಗೂ ಬನ್ನಹಳ್ಳಿಹುಂಡಿಯ ಶ್ರೀ ಸುಂದರಸ್ವಾಮಿಯವರುಗಳನ್ನು ಸನ್ಮಾನಿಸಲಾಯಿತು. ಶ್ರೀ ಜೆ.ಜಿ. ರಾಜಣ್ಣನವರು ಸ್ವಾಗತಿಸಿದರು. ಶ್ರೀ ಶಾಮರಾಜ್ ನಿರೂಪಿಸಿದರು.

## ಪ್ರೊ. ಎಸ್. ಅಯ್ಯಪ್ಪನ್‌ರವರಿಂದ ಉಪನ್ಯಾಸ



ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರು ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಎಸ್. ಅಯ್ಯಪ್ಪನ್‌ರವರು 'ಕೃಷಿ ಕ್ಷೇತ್ರದಲ್ಲಿನ ಅವಕಾಶಗಳು' ವಿಷಯ ಕುರಿತು ಉಪನ್ಯಾಸ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

**ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 21.12.2022ರಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರು ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಎಸ್. ಅಯ್ಯಪ್ಪನ್‌ರವರು 'ಕೃಷಿ ಕ್ಷೇತ್ರದಲ್ಲಿನ ಅವಕಾಶಗಳು' ಕುರಿತು ಉಪನ್ಯಾಸ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಕೃಷಿ ಕ್ಷೇತ್ರದ ಅವಕಾಶಗಳ ಬಗ್ಗೆ ಮಾಹಿತಿ ನೀಡುತ್ತಾ, ಪ್ರಸ್ತುತ ಈ ಪೃಥ್ವಿಯಲ್ಲಿ ಸುಮಾರು 800 ಕೋಟಿ ಜನರು ವಾಸಿಸುತ್ತಿದ್ದಾರೆ. 2030 ರ ವೇಳೆಗೆ ಅನೇಕ ಅಭಿವೃದ್ಧಿ ಧ್ಯೇಯಗಳನ್ನೇ ಇಟ್ಟುಕೊಂಡಿದ್ದು ಅವುಗಳನ್ನು ಸಾಧಿಸುವತ್ತ ಅನೇಕ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಅದರಲ್ಲೂ ಪ್ರಸ್ತುತ ಹವಾಮಾನ ವೈಪರಿತ್ಯ, ಆಹಾರ ಸಮಸ್ಯೆಗಳು, ವಲಸೆ ಹೀಗೆ ಹಲವಾರು ಸವಾಲುಗಳನ್ನು ಮೆಟ್ಟಿ ನಿಲ್ಲಬೇಕಾಗಿದೆ. ನಮ್ಮ ಭಾರತದಲ್ಲಿ ಬೇಸಾಯ ಅಭಿವೃದ್ಧಿ ಸಾಧಿಸಬೇಕಾಗಿದೆ ಎಂದರು. ಪುರಾತನ ಆಧುನಿಕ ಬೇಸಾಯ ಮತ್ತು ಪದ್ಧತಿ, ಆಹಾರ ಧಾನ್ಯಗಳ ಉತ್ಪಾದನೆ, ಸಂಗ್ರಹಣೆ, ಮಳೆ ನೀರು ಸಂಗ್ರಹಣೆ, ಬಳಕೆ ಇವುಗಳ ಬಗ್ಗೆ ಹಲವಾರು ವಿಷಯಗಳನ್ನು ತಿಳಿಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಯೋಜನಾಧಿಕಾರಿಗಳು, ಜೆಎಸ್‌ಎಸ್ ಕೆವಿಕೆಯ ಮುಖ್ಯಸ್ಥರು, ಹಿರಿಯ ವಿಜ್ಞಾನಿಗಳು, ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

## ಮಾನವ ಹಕ್ಕುಗಳ ದಿನಾಚರಣೆ

**ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ** ದಿನಾಂಕ 10.12.2022ರಂದು ರಾಜ್ಯಶಾಸ್ತ್ರ ವಿಭಾಗ ಹಾಗೂ ಐಕ್ಯುಎಸಿ ಸಹಯೋಗದೊಂದಿಗೆ ಮಾನವ ಹಕ್ಕುಗಳ ದಿನಾಚರಣೆಯನ್ನು ಆಚರಿಸಲಾಯಿತು.

ನಂಜನಗೂಡಿನ ವಕೀಲರಾದ ಶ್ರೀ ಪಿ. ಮಹೇಶ್ ಅತ್ತಿಖಾನೆರವರು ಮಾತನಾಡುತ್ತಾ ಈ ಹಿಂದೆ ಜಗತ್ತನ್ನು ಆಳಿದ ಶೇ. 80ಕ್ಕಿಂತ ಹೆಚ್ಚಿನವರು ಸರ್ವಾಧಿಕಾರಿಗಳಾಗಿದ್ದರು. ಹಿಂದೆ ರಾಜ ಅರಮನೆಯಲ್ಲಿ ಜನಿಸುತ್ತಿದ್ದ, ಇಂದು ಮತಪೆಟ್ಟಿಗೆಯಿಂದ ಜನಿಸುತ್ತಾನೆ. ಹಿಂದೆ ಆಳುವವರ ದಬ್ಬಾಳಿಕೆಯಿಂದ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿತ್ತು. ವಿಶ್ವದ ಪ್ರಥಮ ಮತ್ತು ದ್ವಿತೀಯ ಮಹಾಯುದ್ಧಗಳಲ್ಲಿಯೂ ಮಾನವ ಹಕ್ಕುಗಳ ಬಹು ದೊಡ್ಡ ಉಲ್ಲಂಘನೆಯಾಗಿತ್ತು. ಇದನ್ನು ಅರಿತ ವಿಶ್ವದ ನಾಯಕರು ಮಾನವ ಹಕ್ಕುಗಳ ರಕ್ಷಣೆಗೆ ಮುಂದಾದರು. ಪರಿಣಾಮವಾಗಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ

ಡಿಸೆಂಬರ್ 10, 1948ರಂದು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯನ್ನು ಅಂಗೀಕರಿಸಲಾಯಿತು. ಅಂದಿನಿಂದ ಪ್ರತಿ ಡಿಸೆಂಬರ್ 10ನ್ನು ಮಾನವ ಹಕ್ಕುಗಳ ದಿನವನ್ನಾಗಿ ಆಚರಿಸಲಾಗುತ್ತಿದೆ. ಭಾರತ ಸಂವಿಧಾನದಲ್ಲಿರುವ ಪ್ರತಿಯೊಂದು ಹಕ್ಕೂ ಸಹ ಮಾನವ ಹಕ್ಕಾಗಿದ್ದು ಅವುಗಳ ಉಲ್ಲಂಘನೆಯಾದಾಗ ನ್ಯಾಯಾಲಯದ ಮೂಲಕ ಪರಿಹಾರ ಪಡೆಯಬಹುದು. ಮಾನವ ಹಕ್ಕುಗಳಿಗೆ ಚ್ಯುತಿ ಬರದಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ಪ್ರತಿಯೊಬ್ಬರಿಗೂ ಹಕ್ಕುಗಳ ಬಗ್ಗೆ ಅರಿವು ಇರಬೇಕೆಂದು ಹೇಳಿದರು.

ಪ್ರಾಂಶುಪಾಲರಾದ ಪ್ರೊ. ಹೆಚ್.ಎಸ್. ನಾಗೇಂದ್ರ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ ಹುಟ್ಟಿನಿಂದಲೆ ಮಾನವನಲ್ಲಿ ಅಂತರ್ಗತವಾಗಿರುವ ಹಕ್ಕುಗಳಿವೆ. ಮಾನವ ಮಾನವರಾಗಿ ಬದುಕಬೇಕಾದರೆ ಕೆಲವು ಹಕ್ಕುಗಳು ಬಹಳ ಮುಖ್ಯ, ವಾಕ್, ಅಭಿವ್ಯಕ್ತಿ, ಶೈಕ್ಷಣಿಕ ಮೊದಲಾದ ಹಕ್ಕುಗಳು ಪ್ರಮುಖವಾಗಿದ್ದು, ಅವುಗಳ ಬಗ್ಗೆ ಪ್ರತಿಯೊಬ್ಬ ನಾಗರಿಕನೂ ಸರಿಯಾದ ತಿಳುವಳಿಕೆ ಹೊಂದುವುದು ಅಗತ್ಯ ಎಂದು ಹೇಳಿದರು.

ಪ್ರಥಮ ಬಿಎ ವಿದ್ಯಾರ್ಥಿನಿ ಕು. ಎನ್. ನಂದಿನಿ ಪ್ರಾರ್ಥಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್.ಎಸ್. ಪರಶಿವ ಸ್ವಾಗತಿಸಿದರು. ಕು. ಎಸ್. ಸಿಂಧು ವಂದಿಸಿದರು. ಕು. ಎಸ್.ಜಿ. ರಂಜಿತ ಕಾರ್ಯಕ್ರಮ ನಿರೂಪಿಸಿದರು.

## ವಿಶ್ವ ಏಡ್ಸ್ ದಿನಾಚರಣೆ

**ಬೆಂಗಳೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ತರಬೇತಿ ಕೇಂದ್ರದಲ್ಲಿ** ದಿನಾಂಕ 1.12.2022ರಂದು ವಿಶ್ವ ಏಡ್ಸ್ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ಜಯನಗರದ ಜೆಎಸ್‌ಎಸ್ ಪ್ರೌಢಶಾಲೆಯ ವಿಜ್ಞಾನ ಸಹ ಶಿಕ್ಷಕರಾದ ಶ್ರೀಮತಿ ರೇಣುಕಾರವರು ಭಾಗವಹಿಸಿ ಮಾತನಾಡುತ್ತಾ ಏಡ್ಸ್ ಎಂಬುದು ಒಂದು ಮಾರಣಾಂತಿಕ ಕಾಯಿಲೆಯಾಗಿದ್ದು ಇದು ಹೆಚ್‌ಐವಿ ವೈರಾಣುವಿನಿಂದ ಹರಡುತ್ತದೆ. ಮೊದಲಿಗೆ ಆಫ್ರಿಕಾ ಖಂಡದಲ್ಲಿ ಈ ಕಾಯಿಲೆ ಪತ್ತೆಯಾಗಿ ವಿಶ್ವದಾದ್ಯಂತ ಪ್ರಸರಣವನ್ನು ಹೊಂದಿದೆ, ಈ ಕಾಯಿಲೆಯು ಶುದ್ಧೀಕರಿಸದೇ ಬಳಸುವ ಸೂಜಿ ಮತ್ತು ಸಿರಂಜ್‌ಗಳಿಂದ, ಹೆಚ್.ಐ.ವಿ. ಸೋಂಕಿತ ವ್ಯಕ್ತಿ ರಕ್ತದಾನ ಮಾಡುವುದರಿಂದ, ಅಸುರಕ್ಷಿತ ಲೈಂಗಿಕ ಚಟುವಟಿಕೆಯಿಂದ, ಹೆಚ್.ಐ.ವಿ. ಸೋಂಕಿತ ತಾಯಿ ಎದೆ ಹಾಲು ಮೂಲಕ ಮಗುವಿಗೆ ಹರಡುತ್ತದೆ. ಏಡ್ಸ್ ರೋಗಕ್ಕೆ ತುತ್ತಾದ ರೋಗಿಗಳನ್ನು ತಾರತಮ್ಯದಿಂದ ಕಾಣದೆ ಸಮಾನತೆಯಿಂದ ನೋಡಿದಾಗ ಅವರು ಈ ಸಮಾಜದಲ್ಲಿ ಜೀವಿಸುತ್ತಾರೆ ಹಾಗೂ ಸೋಕಿತರು ನಿಗದಿಪಡಿಸಿದ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ತಪಾಸಣೆ ಮಾಡಿಸಿಕೊಂಡು ಅಗತ್ಯ ಔಷಧಿಗಳನ್ನು ಪಡೆಯುವುದರಿಂದ ದೀರ್ಘಕಾಲ ಬದುಕಬಹುದೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಜಯನಗರದ ಜೆಎಸ್‌ಎಸ್ ಹಿರಿಯ ಪ್ರಾಥಮಿಕಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಲತಾರವರು ಉಪಸ್ಥಿತರಿದ್ದರು. ಬೆಂಗಳೂರು ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಡಿ.ಎಂ ಶಶಿಕಲಾರವರು, ಕಾರ್ಯಕ್ರಮ ಸಹಾಯಕರಾದ ಎಲ್. ಅಶೋಕ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು, ವೃತ್ತಿಬೋಧಕರು, ಕಲಿಕಾರ್ಥಿಗಳು ಭಾಗವಹಿಸಿದ್ದರು.

ಮಡಕೆಯ ಮಾಡುವಡೆ ಮಣ್ಣೆ ಮೊದಲು

ತೊಡಿಗೆಯ ಮಾಡುವಡೆ ಹೊನ್ನೆ ಮೊದಲು

ಶಿವಪಥವನರಿವಡೆ ಗುರುಪಥವೆ ಮೊದಲು

ಕೂಡಲಸಂಗಮದೇವರನರಿವಡೆ

ಶರಣರ ಸಂಗವೆ ಮೊದಲು

**ಬಸವಣ್ಣ**

# ಶ್ರಮದಾನ ಮಾಡಿ ಆರೋಗ್ಯ ವೃದ್ಧಿಸಿಕೊಳ್ಳಿ

ಮಹಾತ್ಮ ಗಾಂಧೀಜಿ ಅವರ ಕನಸಾದ ಸ್ವಚ್ಛ ಭಾರತ ಅಂಗವಾಗಿ ಪ್ರತಿಯೊಬ್ಬರು ಶ್ರಮದಾನ ಮಾಡಬೇಕು. ಅಂತೆಯೇ ಸ್ವಚ್ಛತೆಗೆ ಮಹತ್ವ ನೀಡಬೇಕು ಎಂದು ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ದೀಪಾರವರು ತಿಳಿಸಿದರು.

ಕೊಳ್ಳೇಗಾಲ ತಾಲ್ಲೂಕಿನ ಬೂದಿತಿಟ್ಟು ಗ್ರಾಮದಲ್ಲಿ ದಿನಾಂಕ 23.12.2022ರಂದು **ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನವರು** ಆಯೋಜಿಸಿದ್ದ ವಾರ್ಷಿಕ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ದೇಹ ದಂಡಿಸುವುದಲ್ಲದೆ ತಮ್ಮ ಆರೋಗ್ಯ ವೃದ್ಧಿಸಿಕೊಳ್ಳಬೇಕು, ಸ್ವಚ್ಛತೆ ಬಗ್ಗೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಹೆಚ್ಚಿನ ಗಮನಕೊಟ್ಟಿದ್ದರು. ಸ್ವಚ್ಛತೆಯಲ್ಲಿ ದೇವರು ವಾಸಿಸುತ್ತಾನೆ. ಹೀಗಾಗಿ ಎಲ್ಲರೂ ತಮ್ಮ ತಮ್ಮ ಮನೆ, ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಡಾ. ಆನಂದರವರು ಮಾತನಾಡಿ ರಾಷ್ಟ್ರೀಯ ಸೇವಾ ಯೋಜನೆಯು ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೆ ಸಮಾಜ ಸೇವೆಯ ಬಗ್ಗೆ ತಿಳಿಸಲು ಇರುವ ಸರಕಾರದ ಒಂದು ಯೋಜನೆ, ಈ ಯೋಜನೆಯ ಮುಖ್ಯ ಉದ್ದೇಶ ವಿದ್ಯಾರ್ಥಿಗಳು ವ್ಯಕ್ತಿತ್ವವನ್ನು ಸಾರ್ವಜನಿಕ ಸೇವೆಯ ಮೂಲಕ ಅಭಿವೃದ್ಧಿಗೊಳಿಸುವುದಾಗಿದೆ. ಲೋಕಸೇವೆಯ ಮೂಲಕ ರಾಷ್ಟ್ರ ನಿರ್ಮಾಣದ ಕಾರ್ಯಗಳಲ್ಲಿ ಒಳಗೊಂಡಂತಹ ಅನುಭವವನ್ನು ನೀಡುವುದು ಹಾಗೂ ಇದರೊಂದಿಗೆ ರಾಷ್ಟ್ರ ಪ್ರೇಮ ಮತ್ತು ಸೇವಾ ಭಾವನೆಗಳನ್ನು ಬೆಳೆಸುವುದಾಗಿದೆ ಎಂದರು.

ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು, ಬೂದಿತಿಟ್ಟು ಗ್ರಾಮದ ಚಂದ್ರಶೇಖರ ಸ್ವಾಮೀಜಿರವರು, ಬೂದಿತಿಟ್ಟಿನ ಸ.ಹಿ.ಪ್ರಾ. ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಚಿಕ್ಕಮಾದುರವರು ಹಾಗೂ ಕಾರ್ಯಕ್ರಮಾಧಿಕಾರಿಯಾದ ಶ್ರೀ ಬಸವದತ್ತ ಮಹದೇವಪ್ರಸಾದ್ ಉಪಸ್ಥಿತರಿದ್ದರು.

ಇದಕ್ಕೂ ಮೊದಲು ಬೆಳಗ್ಗೆ ಬೂದಿತಿಟ್ಟು ಶಾಲೆಯ ಆವರಣವನ್ನು ಶಿಬಿರಾರ್ಥಿಗಳು ಸ್ವಚ್ಛಗೊಳಿಸಿದರು. □



ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಜಾತ್ರಾಮಹೋತ್ಸವದ ಶೈಕ್ಷಣಿಕ ಮತ್ತು ವಿಜ್ಞಾನ ವಸ್ತುಪ್ರದರ್ಶನದ ಅಂಗವಾಗಿ ಏರ್ಪಡಿಸಿದ್ದ ಶಾಲಾ ಮಟ್ಟದ ವಿಜ್ಞಾನ ವಸ್ತುಪ್ರದರ್ಶನವನ್ನು ಸುತ್ತೂರು ಶಾಖೆಯ ಯೂನಿಯನ್ ಬ್ಯಾಂಕ್‌ನ ವ್ಯವಸ್ಥಾಪಕರಾದ ಶ್ರೀ ಶಿವಪ್ರಕಾಶ್, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾರವರು ಉದ್ಘಾಟಿಸಿ ವೀಕ್ಷಿಸಿದರು. ಚಿತ್ರದಲ್ಲಿ ಸುತ್ತೂರು ಜೆಎಸ್‌ಎಸ್ ಸಂಸ್ಥೆಯ ಮುಖ್ಯಸ್ಥರುಗಳು ಹಾಗೂ ವಿದ್ಯಾರ್ಥಿಗಳನ್ನು ಕಾಣಬಹುದು.

## ಸಾಧನೆ

### ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟದ ಫಲಿತಾಂಶ



ಪ್ರಶಸ್ತಿ ವಿಜೇತ ಕ್ರೀಡಾಪಟುಗಳೊಂದಿಗೆ ಶ್ರೀ ಸಂಪತ್ತು, ಸುತ್ತೂರು ಡಿ.ಇಎಲ್.ಇಡಿ ಕಾಲೇಜಿನ ಪ್ರಾಂಶುಪಾಲರು ಹಾಗೂ ಕ್ರೀಡಾಧಿಕಾರಿಗಳನ್ನು ಕಾಣಬಹುದು

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣೆಯ ಅಂಗವಾಗಿ ಇತ್ತೀಚೆಗೆ ನಡೆದ 3 ದಿನಗಳ ಜೆಎಸ್‌ಎಸ್ ಅಂತರ–ಸಂಸ್ಥೆಗಳ ಕ್ರೀಡಾಕೂಟದಲ್ಲಿ ವಿವಿಧ ಶಾಲಾ ಕಾಲೇಜುಗಳು ಮೇಲಾಟಗಳಲ್ಲಿ (ಅಥ್ಲೆಟಿಕ್ಸ್) ವೈಯಕ್ತಿಕ ಮತ್ತು ತಂಡ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

#### ಪ್ರಾಥಮಿಕ ಶಾಲಾ ವಿಭಾಗ

**ವೈಯಕ್ತಿಕ ಪ್ರಶಸ್ತಿ :** ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ **ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ** ವಿದ್ಯಾರ್ಥಿಗಳಾದ ಕು. ಡಿ.ಎ. ಯಶವಂತ 13 ಅಂಕಗಳು ಮತ್ತು ಕು. ಸಾಕ್ಷಿ 10 ಅಂಕಗಳನ್ನು ಪಡೆದು ವೈಯಕ್ತಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ತಂಡ ಪ್ರಶಸ್ತಿ :** **ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯು** ಬಾಲಕರ ವಿಭಾಗದಲ್ಲಿ 43 ಅಂಕಗಳು ಮತ್ತು ಬಾಲಕಿಯರ ವಿಭಾಗದಲ್ಲಿ 37 ಅಂಕಗಳನ್ನು ಪಡೆದು ತಂಡ ಪ್ರಶಸ್ತಿಯನ್ನು ಪಡೆದುಕೊಂಡಿದೆ

#### ಪ್ರೌಢಶಾಲಾ ವಿಭಾಗ

**ವೈಯಕ್ತಿಕ ಪ್ರಶಸ್ತಿ :** ಬಾಲಕರ ವಿಭಾಗದಲ್ಲಿ **ವಾಗನೂರಿನ ಜೆಎಸ್‌ಎಸ್ ಪ್ರೌಢಶಾಲೆಯ** ವಿದ್ಯಾರ್ಥಿಗಳಾದ ಕು. ಎಂ.ಎನ್. ಭುವನ 15 ಅಂಕಗಳು ಮತ್ತು ಬಾಲಕಿಯರ ವಿಭಾಗದಲ್ಲಿ ಕು. ಪಿ. ಅಮೂಲ್ಯ 15 ಅಂಕಗಳನ್ನು ಪಡೆದು ವೈಯಕ್ತಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ತಂಡ ಪ್ರಶಸ್ತಿ :** **ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯು** ಬಾಲಕರ ವಿಭಾಗದಲ್ಲಿ 20 ಅಂಕಗಳು ಮತ್ತು ಬಾಲಕಿಯರ ವಿಭಾಗದಲ್ಲಿ 35 ಅಂಕಗಳನ್ನು ಪಡೆದು ತಂಡ ಪ್ರಶಸ್ತಿಯನ್ನು ಪಡೆದುಕೊಂಡಿದೆ.

#### ಪದವಿಪೂರ್ವ ಕಾಲೇಜು ವಿಭಾಗ

**ವೈಯಕ್ತಿಕ ಪ್ರಶಸ್ತಿ:** ಬಾಲಕರ ವಿಭಾಗದಲ್ಲಿ **ದೊಡ್ಡಕಾಡನೂರಿನ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ** ಕು. ಎ.ಜೆ. ಮಹೇಶ್ 10 ಅಂಕಗಳು ಮತ್ತು ಬಾಲಕಿಯರ ವಿಭಾಗದಲ್ಲಿ **ಚಾಮರಾಜನಗರದ**

**ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ** ಕು. ಪೂಜಾ 10 ಅಂಕಗಳನ್ನು ಪಡೆದು ವೈಯಕ್ತಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ತಂಡ ಪ್ರಶಸ್ತಿ : ದೊಡ್ಡಕಾಡನೂರಿನ ಜೆಎಸ್‌ಎಸ್ ಪದವಿಪೂರ್ವ ಕಾಲೇಜು** ಬಾಲಕರ ವಿಭಾಗದಲ್ಲಿ 17 ಅಂಕಗಳು ಮತ್ತು ಬಾಲಕಿಯರ ವಿಭಾಗದಲ್ಲಿ 29 ಅಂಕಗಳನ್ನು ಪಡೆದು ತಂಡ ಪ್ರಶಸ್ತಿಯನ್ನು ಪಡೆದುಕೊಂಡಿದೆ.

### ಪದವಿ ಕಾಲೇಜು ವಿಭಾಗ

**ವೈಯಕ್ತಿಕ ಪ್ರಶಸ್ತಿ :** ಪುರುಷರ ವಿಭಾಗದಲ್ಲಿ **ಊಟಿಯ ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿಯ** ವಿದ್ಯಾರ್ಥಿಯಾದ ಕು. ಸುಬ್ರನಿಲ್ ಮಂಡಲ್ 08 ಅಂಕಗಳು ಮತ್ತು ಮಹಿಳೆಯರ ವಿಭಾಗದಲ್ಲಿ **ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ** ಕು. ಟಂಜನ್ ಜೋಯಿ 08 ಅಂಕಗಳನ್ನು ಪಡೆದು ವೈಯಕ್ತಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ತಂಡ ಪ್ರಶಸ್ತಿ : ಊಟಿಯ ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿಯು** ಪುರುಷರ ವಿಭಾಗದಲ್ಲಿ 26 ಅಂಕಗಳು ಮತ್ತು ಮಹಿಳೆಯರ ವಿಭಾಗದಲ್ಲಿ **ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜು** ಮತ್ತು **ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು** ಇವರು ತಲಾ 16 ಅಂಕಗಳನ್ನು ಪಡೆದು ಜೋಡಿ ತಂಡ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ.

### ಪಥಚಲನೆ ಮತ್ತು ಪ್ರಮುಖ ಆಟಗಳ ವಿಭಾಗ

**ಪಥಚಲನ:** ಪ್ರಾಥಮಿಕ ಶಾಲಾ ವಿಭಾಗದಲ್ಲಿ **ಹುಲ್ಲಹಳ್ಳಿಯ ಜೆಎಸ್‌ಎಸ್ ಶಾಲೆ,** ಪ್ರೌಢಶಾಲಾ ವಿಭಾಗದಲ್ಲಿ **ಹೊರೆಯಾಲದ ಜೆಎಸ್‌ಎಸ್ ಶಾಲೆ** ಪ್ರಥಮ ಸ್ಥಾನ ಪಡೆದುಕೊಂಡಿವೆ. ಪದವಿಪೂರ್ವ ಕಾಲೇಜು ವಿಭಾಗದಲ್ಲಿ **ಯಳಂದೂರಿನ ಜೆಎಸ್‌ಎಸ್ ಮಹಿಳಾ ಕಾಲೇಜು,** ಪದವಿ ಕಾಲೇಜು ವಿಭಾಗದಲ್ಲಿ **ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯವು** ಪ್ರಥಮ ಸ್ಥಾನ ಪಡೆದಿದೆ.

**ಪ್ರಾಥಮಿಕ ಶಾಲಾ ವಿಭಾಗಗಳ** ಕಬಡ್ಡಿಯಲ್ಲಿ ಬಾಲಕರ ವಿಭಾಗದಲ್ಲಿ **ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯು** ಪ್ರಥಮ ಸ್ಥಾನ ಪಡೆದರೆ, ಹೆಚ್.ವಿ. ರೋಹಿತ್ ಉತ್ತಮ ಆಟಗಾರ ಪ್ರಶಸ್ತಿ ಪಡೆದಿದ್ದಾರೆ. ಬಾಲಕಿಯರ ವಿಭಾಗದಲ್ಲಿ **ರಾಮಾಪುರದ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯು** ಪ್ರಥಮ ಸ್ಥಾನ ಪಡೆದರೆ, ಗಂಗೋತ್ರಿ ಉತ್ತಮ ಆಟಗಾರ್ತಿ ಪ್ರಶಸ್ತಿ ಪಡೆದಿದ್ದಾರೆ.

**ಪ್ರೌಢಶಾಲಾ ವಿಭಾಗಗಳ** ಖೋ-ಖೋದಲ್ಲಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ **ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯು** ಪ್ರಥಮ ಸ್ಥಾನ ಪಡೆದರೆ, ಪ್ರಕಾಶ್ ಉತ್ತಮ ಆಟಗಾರ ಪ್ರಶಸ್ತಿ ಪಡೆದಿದ್ದಾರೆ. ದೊಡ್ಡಕಾಡನೂರಿನ ಎಂ. ದಿವ್ಯ ಉತ್ತಮ ಆಟಗಾರ್ತಿ ಪ್ರಶಸ್ತಿ ಪಡೆದಿದ್ದಾರೆ.

**ಪ್ರೌಢಶಾಲಾ ವಿಭಾಗಗಳ** ವಾಲಿಬಾಲ್‌ನಲ್ಲಿ **ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯು** ಪ್ರಥಮ ಸ್ಥಾನ ಪಡೆದರೆ, ಸಿ. ರಾಕೇಶ್ ಉತ್ತಮ ಆಟಗಾರ ಪ್ರಶಸ್ತಿ ಪಡೆದಿದ್ದಾರೆ. ಥ್ರೋಬಾಲ್‌ನಲ್ಲಿ ಮೈಸೂರಿನ ಟಿಐಎಸ್ ಆವರಣದಲ್ಲಿರುವ **ಜೆಎಸ್‌ಎಸ್ ಪಬ್ಲಿಕ್ ಶಾಲೆಯು** ಪ್ರಥಮ ಸ್ಥಾನ ಪಡೆದರೆ, ಏಕಾಂಶ ಕಿರಣ್ ಉತ್ತಮ ಆಟಗಾರ್ತಿ ಪ್ರಶಸ್ತಿ ಪಡೆದಿದ್ದಾರೆ.

**ಪದವಿಪೂರ್ವ ಕಾಲೇಜು ವಿಭಾಗಗಳ** ಪುರುಷರ ವಾಲಿಬಾಲ್‌ನಲ್ಲಿ **ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಪದವಿಪೂರ್ವ ಕಾಲೇಜು** ಪ್ರಥಮ ಸ್ಥಾನ ಪಡೆದರೆ, ಎಸ್. ಚರಣ್ ಉತ್ತಮ ಆಟಗಾರ ಪ್ರಶಸ್ತಿ ಪಡೆದಿದ್ದಾರೆ. ಪುರುಷರ ಬಾಲ್‌ಬ್ಯಾಡ್ಮಿಂಟನ್‌ನಲ್ಲಿ **ಹುಲ್ಲಹಳ್ಳಿಯ ಜೆಎಸ್‌ಎಸ್ ಪದವಿಪೂರ್ವ ಕಾಲೇಜು** ಪ್ರಥಮ ಸ್ಥಾನ ಪಡೆದರೆ, ಆರ್. ಗುರುರಾಜ್ ಉತ್ತಮ ಆಟಗಾರ ಪ್ರಶಸ್ತಿ ಪಡೆದಿದ್ದಾರೆ. ಮಹಿಳೆಯರ ಥ್ರೋಬಾಲ್‌ನಲ್ಲಿ **ಸರಗೂರಿನ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು** ಪ್ರಥಮ ಸ್ಥಾನ ಪಡೆದರೆ, ಸಹನ ಉತ್ತಮ ಆಟಗಾರ್ತಿ ಪ್ರಶಸ್ತಿ ಪಡೆದಿದ್ದಾರೆ. ಮಹಿಳೆಯರ ಬಾಲ್‌ಬ್ಯಾಡ್ಮಿಂಟನ್‌ನಲ್ಲಿ **ದೇವಲಾಪುರ ಜೆಎಸ್‌ಎಸ್ ಪದವಿಪೂರ್ವ ಕಾಲೇಜು** ಪ್ರಥಮ ಸ್ಥಾನ ಪಡೆದಿದೆ. ಬಿ. ಸೌಮ್ಯ ಉತ್ತಮ ಆಟಗಾರ್ತಿ ಪ್ರಶಸ್ತಿ ಪಡೆದಿದ್ದಾರೆ.

**ಪದವಿ ಕಾಲೇಜು ವಿಭಾಗಗಳ** ಪುರುಷರ ವಾಲಿಬಾಲ್‌ನಲ್ಲಿ **ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್**

**ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** ಪ್ರಥಮ ಸ್ಥಾನ ಪಡೆದರೆ ಬೆಂಗಳೂರು ತಾಂತ್ರಿಕ ಶಿಕ್ಷಣ ಅಕ್ಯಾಡೆಮಿಯ ಟಿ. ಚರಣ್‌ಕುಮಾರ್ ಉತ್ತಮ ಆಟಗಾರ ಪ್ರಶಸ್ತಿ ಪಡೆದಿದ್ದಾರೆ. ಪುರುಷರ ಬಾಲ್‌ಬ್ಯಾಡ್ಮಿಂಟನ್‌ನಲ್ಲಿ ಊಟಿ ರಸ್ತೆಯ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** ಪ್ರಥಮ ಸ್ಥಾನ ಪಡೆದರೆ, ಎಂ. ಚಂದನ್ ಉತ್ತಮ ಆಟಗಾರ ಪ್ರಶಸ್ತಿ ಪಡೆದಿದ್ದಾರೆ. ಮಹಿಳೆಯರ ಥ್ರೋಬಾಲ್‌ನಲ್ಲಿ **ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು** ಪ್ರಥಮ ಸ್ಥಾನ ಪಡೆದರೆ ಎಂ. ಅಕ್ಷಯ್ ಅರಸ್ ಉತ್ತಮ ಆಟಗಾರ್ತಿ ಪ್ರಶಸ್ತಿ ಪಡೆದಿದ್ದಾರೆ. ಬಾಲ್‌ಬ್ಯಾಡ್ಮಿಂಟನ್‌ನಲ್ಲಿ **ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜು** ಪ್ರಥಮ ಸ್ಥಾನ ಪಡೆದರೆ ಟಿ.ಎಸ್. ಸಿಂಚನ ಉತ್ತಮ ಆಟಗಾರ್ತಿ ಪ್ರಶಸ್ತಿ ಪಡೆದಿದ್ದಾರೆ. ಪ್ರಶಸ್ತಿ ವಿಜೇತ ಕ್ರೀಡಾಪಟುಗಳನ್ನು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಎಲ್ಲಾ ಮುಖ್ಯಸ್ಥರುಗಳು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.




ಸುತ್ತೂರಿನಲ್ಲಿ ನಡೆದ ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಪಡೆದ ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ ಕ್ರೀಡಾಪಟುಗಳೊಂದಿಗೆ ಮುಖ್ಯೋಪಾಧ್ಯಾಯರಾದ ಶ್ರೀ ಜಿ.ಎಂ. ಷಡಕ್ಷರಿ ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕರುಗಳಿದ್ದಾರೆ.

## ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಗೆ ಕ್ರೀಡಾ ಸಮಗ್ರ ಪ್ರಶಸ್ತಿ



ಸುತ್ತೂರಿನಲ್ಲಿ ನಡೆದ ಜೆಎಸ್‌ಎಸ್ ಅಂತರ–ಸಂಸ್ಥೆಗಳ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಪಡೆದ ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯ ಕ್ರೀಡಾಪಟುಗಳೊಂದಿಗೆ ಸಂಸ್ಥೆಯ ಮುಖ್ಯಸ್ಥರು ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕರುಗಳಿದ್ದಾರೆ.



ಜಿಲ್ಲಾ ಸಾಕ್ಷರತಾ ಶಿಕ್ಷಣ ಇಲಾಖೆಯ ವತಿಯಿಂದ ಮೈಸೂರಿನಲ್ಲಿ ಆಯೋಜಿಸಿದ್ದ ಜಿಲ್ಲಾಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ ಕ್ರೀಡಾಪಟುಗಳಾದ ಡಿ.ಎ. ಯಶವಂತ್ ಹಾಗೂ ಎಸ್. ದೀಪಿಕಾರವರೊಂದಿಗೆ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ತರಬೇತಿ ನೀಡಿದ ಶಿಕ್ಷಕರನ್ನು ಕಾಣಬಹುದು.

## ಹಾಸನ ಜಿಲ್ಲಾ ಅಮೇಚೂರ್ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಪ್ರಥಮ



ಹಾಸನ ಜಿಲ್ಲಾ ಅಮೇಚೂರ್ ಅಥ್ಲೇಟಿಕ್ ಸಂಸ್ಥೆ ವತಿಯಿಂದ ಹಾಸನ ಜಿಲ್ಲಾ ಅಮೇಚೂರ್ ಅಥ್ಲೆಟಿಕ್ ಕ್ರೀಡಾಕೂಟವನ್ನು ಹಾಸನದ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕ್ರೀಡಾಕೂಟದಲ್ಲಿ **ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯ** ವಿದ್ಯಾರ್ಥಿಗಳಾದ ಕು. ನಿಸರ್ಗ ಡಿ. ಸಾಲಿಯಾನ 80 ಮೀ ಓಟ ಮತ್ತು ಉದ್ದ ಜಿಗಿತ ಸ್ಪರ್ಧೆಯಲ್ಲಿ ಮೊದಲನೇ ಸ್ಥಾನ, ಕು. ಹೆಚ್.ಡಿ. ಮಂಜುನಾಥ್ 80 ಮೀ ಓಟದಲ್ಲಿ ಮೊದಲನೇ ಬಹುಮಾನ, ಕು. ಕನಿಷ್ ಉದ್ದಜಿಗಿತ ಸ್ಪರ್ಧೆಯಲ್ಲಿ ಮೊದಲನೇ ಬಹುಮಾನ, ಕು. ವರುಣಿಕ ಟ್ರಯಥ್ಲಾನ್– ಎ ಸ್ಪರ್ಧೆಯಲ್ಲಿ ಮೊದಲನೆ ಬಹುವಾನವನ್ನು ಪಡೆದಿರುತ್ತಾರೆ. ಇವರೆಲ್ಲರೂ ರಾಷ್ಟ್ರಮಟ್ಟದ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದು, ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.



ಹಾಸನ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯ 10 ನೇ ತರಗತಿಯ ವಿದ್ಯಾರ್ಥಿನಿ ಕು. ಬಿ.ಎನ್. ಜೀವಿತ ಭರತನಾಟ್ಯ ಸ್ಪರ್ಧೆಯಲ್ಲಿ ಮೊದಲನೇ ಬಹುಮಾನವನ್ನು ಪಡೆದು ರಾಜ್ಯ ಮಟ್ಟದ ಭರತನಾಟ್ಯ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

## ಸಿಬಿಎಸ್‌ಇ ಅಂತರ ಶಾಲಾ ಅಥ್ಲೆಟಿಕ್ ಕ್ರೀಡಾಕೂಟ



**ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ಸಿಬಿಎಸ್‌ಇ ಅಂತರ ಶಾಲಾ ಅಥ್ಲೆಟಿಕ್ ಕ್ರೀಡಾಕೂಟವನ್ನು ದಿನಾಂಕ 16.12.2022ರಂದು ಆಯೋಜಿಸಲಾಗಿತ್ತು. ಪೊಲೀಸ್ ಅಧಿಕಾರಿಗಳಾದ ಶ್ರೀ ಎಚ್.ಎನ್. ಮಿಥುನ್ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡುತ್ತಾ ಕ್ರೀಡೆ ವಿದ್ಯಾರ್ಥಿಗಳಲ್ಲಿ ಬಹುಮುಖ್ಯವಾದುದು. ಅದನ್ನು ಜ್ಞಾನದ ಗಳಿಕೆಯಲ್ಲಿ ಉತ್ತಮವಾಗಿ ಬಳಸಿಕೊಳ್ಳಬೇಕು. ಉತ್ತಮ ಶಾಲಾ ವಾತಾವರಣ, ಶಾಲಾ ಮೈದಾನ ಹೊಂದಿರುವ ನೀವು ನಿಮ್ಮ ಸರ್ವಾಂಗೀಣ ಅಭಿವೃದ್ಧಿಗೆ ಕ್ರೀಡೆಯನ್ನು ಬಳಸಿಕೊಳ್ಳಿ ಎಂದರು. ಅಬ್ರಾಹಂ ಲಿಂಕನ್ ಮತ್ತು ಡಾ. ಅಬ್ದುಲ್ ಕಲಾಂ ಅವರ ವಿಚಾರಗಳನ್ನು ಮೆಲುಕು ಹಾಕುತ್ತಾ ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಪ್ರಾಚಾರ್ಯರಾದ ಶ್ರೀ ಮಧುಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಹಾಸನ ಜಿಲ್ಲೆಯ 10 ಸಿಬಿಎಸ್‌ಇ ಶಾಲೆಯ ಪ್ರೌಢಶಾಲಾ ಕ್ರೀಡಾಪಟುಗಳು ಭಾಗವಹಿಸಿದ್ದರು. ಕ್ರೀಡಾಕೂಟದಲ್ಲಿ 100, 800, 1500 ಮೀಟರ್ ಓಟ, ರಿಲೇ, ಎತ್ತರ ಜಿಗಿತ ಮತ್ತು ಚಕ್ರ ಎಸೆತದ ಸ್ಪರ್ಧೆಗಳಲ್ಲಿ ಪ್ರೌಢಶಾಲೆಗಳ ಬಾಲಕ, ಬಾಲಕಿಯರು ಭಾಗವಹಿಸಿ ಕ್ರೀಡಾಸ್ಫೂರ್ತಿ ಮೆರೆದರು. ಬಾಗೆ ಜೆಎಸ್‌ಎಸ್ ಶಾಲೆಯು ಅತಿಹೆಚ್ಚು ಬಹುಮಾನ ಪಡೆಯುವುದರೊಂದಿಗೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಸಕಲೇಶಪುರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಮಂಜುನಾಥ್ ಹಾಗೂ ಬಾಣಾವರದ ಸಿಬಿಎಸ್‌ಇ ಶಾಲೆಗಳ ಪ್ರಾಂಶುಪಾಲರುಗಳು ಭಾಗವಹಿಸಿ ವಿಜೇತ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಿದರು.

10ನೇ ತರಗತಿಯ ಕು. ಮಾನ್ಯ, ಕು. ಬುಷ್ರಾ, ಕು. ಕಿರಣ್ ಮತ್ತು ಕು. ಸಿಮ್ರಾನ್ ನಿರೂಪಿಸಿದರು. ಕು. ಯುಕ್ತ ಪ್ರಾರ್ಥಿಸಿದರು. 9ನೇ ತರಗತಿಯ ಕು. ದ್ಯುತಿ ಸ್ವಾಗತಿಸಿದರು. ಕು. ಪ್ರಖ್ಯಾತ್ ಚಂದ್ರ ತೇಜಸ್ವಿ ವಂದಿಸಿದರು.

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞನವಿಲ್ಲದನ್ನಕ್ಕ
ಚನ್ನಮಲ್ಲಿಕಾರ್ಜುನಾ

**ಅಕ್ಕಮಹಾದೇವಿ**

# ಸುತ್ತೂರಿನ ಜೆಎಸ್‌ಎಸ್ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಶೈಕ್ಷಣಿಕ ವಸ್ತುಪ್ರದರ್ಶನ



ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಕ್ಲಸ್ಟರ್ ಮಟ್ಟದ ಶೈಕ್ಷಣಿಕ ವಸ್ತುಪ್ರದರ್ಶನದ ಉದ್ಘಾಟನಾ ಸಂದರ್ಭದಲ್ಲಿ ಪ್ರೊ. ಸದಾಶಿವಮೂರ್ತಿ, ಪ್ರೊ. ಮಲ್ಲಪ್ಪ, ಶ್ರೀ ಮರಿಸ್ವಾಮಿ, ಪ್ರೊ. ಸಿದ್ದರಾಮಯ್ಯ, ಪ್ರೊ. ಕೆಂಪಣ್ಣಸ್ವಾಮಿ, ಪ್ರೊ. ವಿಜಯ ಮಂಜುನಾಥಗುರು, ಶ್ರೀ ನಾಗರಾಜಚಾರ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಶಿಕ್ಷಣಾಧಿಕಾರಿಗಳಾದ ಶ್ರೀ ಎನ್. ರೇಣುಕಸ್ವಾಮಿ, ವಿಷಯ ಪರಿವೀಕ್ಷಕರಾದ ಶ್ರೀ ಎಸ್.ಸಿ. ಚನ್ನಬಸಪ್ಪ, ಸಹಾಯಕ ಸಂಯೋಜನಾಧಿಕಾರಿಗಳಾದ ಶ್ರೀ ವೀರಭದ್ರಯ್ಯ ಹಾಗೂ ಶಾಲಾ ಮುಖ್ಯಸ್ಥರುಗಳಿದ್ದಾರೆ.

**ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ಜಾತ್ರಾ ಮಹೋತ್ಸವದ ಅಂಗವಾಗಿ ಕ್ಲಸ್ಟರ್ ಮಟ್ಟದ ಶೈಕ್ಷಣಿಕ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಕ್ಲಸ್ಟರ್ ಶಾಲೆಗಳಾದ ಸುತ್ತೂರು, ಹಳ್ಳಿಕೆರೆಹುಂಡಿ, ಹುಲ್ಲಹಳ್ಳಿ, ಮಹದೇವನಗರ, ನಂಜನಗೂಡು ಬಾಲಕಿಯರ ಪ್ರೌಢಶಾಲೆಗಳ ಒಟ್ಟು 129 ಮಾದರಿಗಳು ಪ್ರದರ್ಶನಗೊಂಡವು.

ತೀರ್ಪುಗಾರರಾಗಿ ಪ್ರೊ. ಸದಾಶಿವಮೂರ್ತಿ, ಪ್ರೊ. ಮಲ್ಲಪ್ಪ, ಶ್ರೀ ಮರಿಸ್ವಾಮಿ, ಪ್ರೊ. ಸಿದ್ದರಾಮಯ್ಯ, ಪ್ರೊ. ವಿಜಯ ಮಂಜುನಾಥಗುರು, ಪ್ರೊ. ಕೆಂಪಣ್ಣಸ್ವಾಮಿ, ಶ್ರೀ ನಾಗರಾಜಚಾರ್‌ರವರು ಆಗಮಿಸಿದ್ದರು.



ನಂಜನಗೂಡು ತಾಲ್ಲೂಕಿನ ತಾಂಡವಪುರ ಕ್ರೈಸ್ತ ಶಾಲೆಯವರು ಏರ್ಪಡಿಸಿದ್ದ ಜಿಲ್ಲಾಮಟ್ಟದ ಸೆಂಟ್ ಛಾವರ ಕಪ್ ವಾಲಿಬಾಲ್ ಪಂದ್ಯಾವಳಿಯಲ್ಲಿ ಸುತ್ತೂರಿನ ಜೆಎಸ್‌ಎಸ್ ಪೌಢಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಪ್ರಥಮಸ್ಥಾನ ಗಳಿಸಿ ಪಾರಿತೋಷಕ ಹಾಗೂ 5000 ರೂಗಳ ನಗದು ಬಹುಮಾನ ಪಡೆದಿದ್ದಾರೆ. ಚಿತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಅಭಿವೃದ್ಧಿ ವಿಭಾಗದ ಪ್ರಭಾರ ನಿರ್ದೇಶಕರಾದ ಶ್ರೀ ಕೆ.ಎಲ್. ರೇವಣ್ಣಸ್ವಾಮಿಯವರು, ಮುಖ್ಯೋಪಾಧ್ಯಾಯರುಗಳು ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕರುಗಳಿದ್ದಾರೆ.

# ಕ್ರೀಡಾ, ಕಲೆ ಮತ್ತು ಸಂಸ್ಕೃತಿ ಶಿಕ್ಷಣದ ಅವಿಭಾಜ್ಯ ಅಂಗಗಳು



ಶ್ರೀ ಎಸ್.ಎಸ್. ದಶರಥ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು. ಕು. ನಂದಿತಾ, ಶ್ರೀ ಶ್ರೀಧರ್, ಕ್ರೀಡಾ ವೇದಿಕೆ ಸಂಚಾಲಕರು, ಶ್ರೀಮತಿ ಎನ್. ಭ್ರಮರಾಂಬ, ಸಾಂಸ್ಕೃತಿಕೆ ವೇದಿಕೆ ಸದಸ್ಯೆ, ಪ್ರಾಚಾರ್ಯರಾದ ಡಾ. ಎಂ. ಪ್ರಭು, ಶ್ರೀ ಎ.ಡಿ. ಪ್ರಕಾಶ್, ಮಾಲೀಕರು, ಎಪಿಎಸ್ ಜ್ಯೂಯಲರ್ಸ್, ಕೊಳ್ಳೇಗಾಲ, ಪ್ರೊ. ಹೆಚ್. ನಟರಾಜನ್, ಮುಖ್ಯಸ್ಥರು, ಇತಿಹಾಸ ವಿಭಾಗ ಹಾಗೂ ಕು. ಜಯಲಕ್ಷ್ಮಿರವರನ್ನು ಕಾಣಬಹುದು.

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ನಡೆದ 2022–23ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಯನ್ನು ಕೆಎಸ್‌ಆರ್‌ಟಿಸಿ ಚಾಮರಾಜನಗರ ವಿಭಾಗಿಯ ಸಂಚಾರ ನಿಯಂತ್ರಣಾಧಿಕಾರಿಗಳಾದ ಶ್ರೀ ಎಸ್.ಎಸ್. ದಶರಥರವರು ಉದ್ಘಾಟಿಸಿದರು. ದೇಹ ಮತ್ತು ಮನಸ್ಸುಗಳ ವಿಕಾಸ ಅತಿ ಮುಖ್ಯವಾದದು. ಆದ್ದರಿಂದ ವ್ಯಾಸಂಗದ ಅವಧಿಯಲ್ಲಿ ವಿದ್ಯಾರ್ಥಿಗಳು ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ವಿಕಾಸಗೊಳ್ಳಬೇಕು. ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳೆರಡೂ ಮಾನಸಿಕ ಆರೋಗ್ಯವನ್ನು ವೃದ್ಧಿಸುತ್ತವೆ. ಜೀವನವೆಂದರೆ ಕೇವಲ ಉದ್ಯೋಗ ಅಥವಾ ಸಾಂಸಾರಿಕ ಜೀವನ ನಿರ್ವಹಣೆಯಷ್ಟೇ ಅಲ್ಲ. ಹಾಗಾಗಿ ಜೀವನದಲ್ಲಿ ಕಲೆ, ಸಾಹಿತ್ಯ ಹಾಗೂ ಕ್ರೀಡೆಗಳನ್ನು ರೂಢಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಪಠ್ಯ ಚಟುವಟಿಕೆಯ ಜೊತೆಯಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅಗತ್ಯವಿದ್ದು, ಕ್ರೀಡೆ, ಕಲೆ ಮತ್ತು ಸಂಸ್ಕೃತಿ ವಿಭಾಗಗಳು ಶಿಕ್ಷಣದ ಅವಿಭಾಜ್ಯ ಅಂಗವಾಗಿರುವುದನ್ನು ವಿದ್ಯಾರ್ಥಿಗಳು ಮತ್ತು ಪೋಷಕರು ಅರಿತುಕೊಳ್ಳಬೇಕು ಎಂದರು.

ಎಪಿಎಸ್ ಜ್ಯೂಯಲರ್ಸ್ ಮಾಲೀಕರಾದ ಶ್ರೀ ಎ.ಡಿ. ಶಿವಪ್ರಕಾಶ್ ಕ್ರೀಡಾ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಬೇಕಾದರೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು. ಪಠ್ಯೇತರ ಕ್ಷೇತ್ರದ ಅಭಿವೃದ್ಧಿಯಿಂದ ಮಾತ್ರ ಪಠ್ಯ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಣಬಹುದಾಗಿದೆ. ಈ ಎರಡೂ ಕ್ಷೇತ್ರಗಳು ಶಿಕ್ಷಣ ಎಂಬ ನಾಣ್ಯದ ಎರಡು ಮುಖಗಳು ಎಂದು ಹೇಳಿದರು.

ಪ್ರಾಚಾರ್ಯರಾದ ಡಾ. ಎಂ. ಪ್ರಭು ಮಾತನಾಡಿ ಇಂದು ಶಿಕ್ಷಣ ಕ್ಷೇತ್ರ ಅಭಿವೃದ್ಧಿ ಹೊಂದಿದಷ್ಟೇ ಕ್ರೀಡಾ ಮತ್ತು ಕಲೆ–ಸಂಸ್ಕೃತಿ ಕ್ಷೇತ್ರ ಅಭಿವೃದ್ಧಿ ಸಾಧಿಸುತ್ತಿದೆ. ಈ ಎರಡೂ ಕ್ಷೇತ್ರಗಳು ಬೆಳವಣಿಗೆಯಾಗಬೇಕಾದರೆ ಶಾಲಾ–ಕಾಲೇಜುಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು. ಸಾಂಸ್ಕೃತಿಕ ಚಟುವಟಿಕೆಗಳು ಜೀವನ ನಿರ್ವಹಣೆಗೆ ದಾರಿ ಮಾಡಿಕೊಡುತ್ತವೆ ಎಂದು ತಿಳಿಸಿದರು.

ಐಕ್ಯೂಎಸಿ & ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೊ. ಹೆಚ್.ಜಿ. ನಟರಾಜನ್, ಸಾಂಸ್ಕೃತಿಕೆ ವೇದಿಕೆ ಸದಸ್ಯೆ ಶ್ರೀಮತಿ ಎನ್. ಭ್ರಮರಾಂಬ, ಕ್ರೀಡಾ ವೇದಿಕೆ ಸಂಚಾಲಕರಾದ ಶ್ರೀ ಶ್ರೀಧರ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಜಿಲ್ಲಾ ಸಾಕ್ಷರತಾ ಶಿಕ್ಷಣ ಇಲಾಖೆಯ ವತಿಯಿಂದ ಮೈಸೂರಿನಲ್ಲಿ ಆಯೋಜಿಸಿದ್ದ ಜಿಲ್ಲಾಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ಕ್ರೀಡಾಪಟುಗಳಾದ ರಚನಾಶ್ರೀ, ಎಂ.ಸಿ. ಬಸವರಾಜ್ ಹಾಗೂ ಬಿ.ಎಸ್. ರೋಹಿತ್‌ರವರೊಂದಿಗೆ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ತರಬೇತಿ ನೀಡಿದ ಶಿಕ್ಷಕರನ್ನು ಕಾಣಬಹುದು.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶ್ವ ಏಡ್ಸ್ ದಿನದ ಅಂಗವಾಗಿ ದಿನಾಂಕ 1.12.2022ರಂದು ಜಾಗೃತಿ ಕಾರ್ಯಕ್ರಮವನ್ನು ಆಚರಿಸಲಾಯಿತು. ಆಸ್ಪತ್ರೆಯ ಅಧಿಕಾರಿಗಳು, ವೈದ್ಯರುಗಳಿದ್ದಾರೆ.

# ರಾಜೇಂದ್ರ ಶ್ರೀಗಳವರ ಸಂಸ್ಮರಣೆಯ ಅಂಗವಾಗಿ 27ನೇ ಸಂಗೀತ ಸಮ್ಮೇಳನದಲ್ಲಿ ಅಧ್ಯಕ್ಷರಾದ ವಿದ್ವಾನ್ ವಿ. ನಂಜುಂಡಸ್ವಾಮಿಯವರ ಭಾಷಣ

ಪರಮಪೂಜ್ಯ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣಾರ್ಥವಾಗಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ (ರಿ) ವತಿಯಿಂದ ಹಮ್ಮಿಕೊಂಡಿರುವ 27ನೇ ಸಂಗೀತ ಸಮ್ಮೇಳನಕ್ಕೆ ಅಧ್ಯಕ್ಷನಾಗಿ ಆಯ್ಕೆಯಾಗಿರುವುದು ಪರಮ ಆನಂದವಾಗಿದೆ. ಈ ಆಯ್ಕೆಯನ್ನು ಒಪ್ಪಿ ಆಶೀರ್ವದಿಸಿರುವ ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರಿಗೆ ಗೌರವಪೂರ್ವಕ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತೇನೆ. ಸಭೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಆಯ್ಕೆ ಸಮಿತಿಯ ಗಣ್ಯ ಸದಸ್ಯರೆಲ್ಲರಿಗೂ ಮನಸಾರೆ ವಂದಿಸುತ್ತೇನೆ.

ಇಂತಹ ಶುಭ ಸಂದರ್ಭದಲ್ಲಿ ಸುಸಂಸ್ಕೃತ ಶ್ರೋತೃಗಳೊಂದಿಗೆ ನನ್ನ ಕಲಾಕ್ಷೇತ್ರದ ಅನುಭವಗಳನ್ನು ನಿರ್ವಂಚನೆಯಿಂದ ಹಂಚಿಕೊಳ್ಳುವ ಸದಾವಕಾಶ ದೊರೆತಿರುವುದು ನನ್ನ ಸೌಭಾಗ್ಯ. ಈ ಶುಭಘಳಿಗೆಗೆ ಕಾರಣರು ನನ್ನ ತಂದೆ ತಾಯಿಗಳಾದ ಎಂ. ಶ್ರೀ ವಿಶ್ವೇಶ್ವರಯ್ಯ, ಶ್ರೀಮತಿ ಸುಬ್ಬಲಕ್ಷ್ಮಮ್ಮ, ಗುರು–ಸೋದರರಾದ ಗಾನಕಲಾಭೂಷಣ ಶ್ರೀ ಎಂ. ಚಲುವರಾಯಸ್ವಾಮಿಗಳು, ಎಲ್ಲಾ ಹಿರಿಯ–ಕಿರಿಯ ವಿದ್ವಾಂಸ ವಿದುಷಿಯರು, ದೇಶವಿದೇಶ ಕಲಾ ಸಂಸ್ಥೆಗಳು, ನನ್ನ ಎಲ್ಲಾ ಶಿಷ್ಯವೃಂದ, ಬಂಧು ಬಾಂಧವರು, ಆತ್ಮೀಯ ಸ್ನೇಹ ಬಳಗ ಮತ್ತು ಈ ಮಹಾಸಂಸ್ಥೆಯ ಆಶ್ರಯದಲ್ಲಿ 41 ವರ್ಷಗಳ ಸೇವಾ ಸೌಭಾಗ್ಯ ದೊರಕಿಸಿಕೊಂಡು 12 ವರ್ಷಗಳ ಹಿಂದೆ ನಿವೃತ್ತಿ ಪಡೆದು, 49 ವರ್ಷಗಳಿಂದ ನನ್ನ ಸಹಧರ್ಮಿಣಿಯಾಗಿ ಸಹಕರಿಸುತ್ತಿರುವ ಶ್ರೀಮತಿ ಪ್ರೊ. ಎಚ್.ಎಸ್. ಉಮಾದೇವಿ.

ನನಗೆ ಈಗ 79ನೇ ವರ್ಷ. ಸುಮಾರು 8 ವರ್ಷಗಳ ಹುಡುಗನಾಗಿದ್ದಾಗಿನಿಂದ ಮನೆಯ ಆ ಕಾಲದ ಪರಿಸರ–ಪರಿಸ್ಥಿತಿಗಳ ಅನುಭವ ಜೊತೆಗೆ ಗುರುಮನೆ, ಅರಮನೆಗಳ ಸಂಪರ್ಕದಿಂದ ದೊಡ್ಡ ದೊಡ್ಡ ಎಲ್ಲಾ ವಿಭಾಗದ ಜ್ಞಾನಿಗಳ ಒಡನಾಟದಿಂದ ಪ್ರತಿಯೊಂದು ವಿಚಾರಗಳನ್ನು ಪ್ರಶ್ನಿಸಿ ಕಲಿಯುವ ಸೌಭಾಗ್ಯ ನನ್ನ ಆರಾಧ್ಯದೇವಿ ಶ್ರೀ ಮಹಾಮಾತೆ ಶ್ರೀ ಲಲಿತಾ ಮಹಾತ್ರಿಪುರಸುಂದರೀ ಕೃಪಾಕಟಾಕ್ಷದಿಂದ ದೊರೆತಿದೆ. ಈಗ ನನಗೆ ಇಂತಹ ಒಂದು ಮಹಾಸಂಸ್ಥೆಯ 27ನೇ ಸಂಗೀತ ಸಮ್ಮೇಳನದ ಅಧ್ಯಕ್ಷನಾಗುವಂತಹ ಅವಕಾಶ ದೊರೆತಿರುವುದು ಮಹಾಸೌಭಾಗ್ಯ ಎಂದು ಅತ್ಯಂತ ವಿನಮ್ರವಾಗಿ ತಿಳಿಸಬಯಸುತ್ತೇನೆ.

ಈ ಎಲ್ಲಾ ಹಿನ್ನೆಲೆಯಲ್ಲಿ ನನ್ನ ವೈಯುಕ್ತಿಕ ಅನುಭವಗಳನ್ನು ಚಿಕ್ಕದಾಗಿ ವಿವರಿಸುವ ಪ್ರಯತ್ನ ಮಾಡುತ್ತಿದ್ದೇನೆ.

ಮೊದಲು ನಾನು ಒಬ್ಬ ಶ್ರೋತೃವಾಗಿ ಜಾನಪದ, ಸುಗಮ–ಸಂಗೀತ, ನಾಟಕ, ನೃತ್ಯ, ಕಾವ್ಯವಾಚನ, ಯಕ್ಷಗಾನ, ಹರಿಕಥೆ, ಸಂಗೀತ, ಸಾಹಿತ್ಯ, ಸಂಸ್ಕೃತ, ಶ್ರೀವಿದ್ಯೆ ಹೀಗೆ ಎಲ್ಲಾ ವಿಭಾಗಗಳನ್ನು ಆಲಿಸಿ, ಪ್ರಶ್ನಿಸಿ ತಿಳಿದುಕೊಳ್ಳುವ ಜಾಯಮಾನ ನನ್ನದು. ಇನ್ನೂ ಕೂಡಾ ಒಬ್ಬ ವಿದ್ಯಾರ್ಥಿಯಾಗಿ ಕಲಿಯಬೇಕೆಂಬ ಹಂಬಲ ನನ್ನಲ್ಲಿ ಬತ್ತಿಲ್ಲ. ಇವೆಲ್ಲಾ ನನ್ನೊಬ್ಬನ ಸ್ವತ್ತಲ್ಲ. ಪ್ರತಿಯೊಬ್ಬರೂ ಆನಂದವಾಗಿ ಆಯಾ ಕ್ಷೇತ್ರಗಳಲ್ಲಿ ಜ್ಞಾನ ಪಡೆಯಲು ಮಾಡಲೇಬೇಕಾದ ಕರ್ತವ್ಯ. ಈ ಪೀಠಿಕೆಗೆ ಕಾರಣ: ಇತ್ತೀಚೆಗೆ ಸಾಂಸ್ಕೃತಿಕ ಸಭೆಗಳ ಕಾರ್ಯಕ್ರಮಗಳಲ್ಲಿ ಕಿರಿಯರ ಹಾಜರಿ ಕೇಳ್ಮೆ–'K' ಕಡಿಮೆ ಆಗುತ್ತಿರುವುದು ಶೋಚನೀಯ. ಆದರೆ ಈ ಕಿರಿಯರೇ ತಾವು ಕಲಾಪ್ರದರ್ಶಿಸುವ ಸಂದರ್ಭದಲ್ಲಿ ಎಲ್ಲರ ಹಾಜರಾತಿ, ಮೆಚ್ಚುಗೆ, ಹೊಗಳಿಕೆಗಳ ಅಪೇಕ್ಷೆ ಮಾತ್ರ ಅವರಿಗಿರುತ್ತದೆ. ಇದು ಎಷ್ಟು ಸರಿ ಎಂದು ಯೋಚಿಸೋಣ. ಈ ದಿಸೆಯಲ್ಲಿ ನನ್ನ ಒಂದು ಸಲಹೆ–ದಯವಿಟ್ಟು ಮೊದಲು ಇನ್ನೊಬ್ಬರ ಕಲೆಯನ್ನು ಆಲಿಸಿ, ಆಸ್ವಾದಿಸುವ, ಕಲಿಯುವ ಪ್ರಯತ್ನ ಮೊದಲ ಹೆಜ್ಜೆಯಾಗಿರಲಿ. ಆಗ ಕಲಾದೇವಿ ಇನ್ನೂ ಒಂಬತ್ತು ಹೆಜ್ಜೆಗಳನ್ನು ಇಟ್ಟು ಅಪ್ಪಿಕೊಳ್ಳುತ್ತಾಳೆ.

ಎರಡನೆಯದಾಗಿ 'ತಾಳ್ಮೆ'–'T'. ತಾಳ್ಮೆ ಕೂಡ ಕಡಿಮೆ ಆಗುತ್ತಿದೆ. ವಿದ್ಯುನ್ಮಾನ ಮಾಧ್ಯಮಗಳಿಂದ ಪ್ರಭಾವಿತರಾಗಿ ದಿಢೀರನೆ ಪ್ರಸಿದ್ಧಿಗೆ ಬರುವ ಹಂಬಲ. ಇದು ಅಸಾಧ್ಯ. ಮೊದಲು ಸರಿಯಾದ ಗುರುಗಳಿಂದ ಭಕ್ತಿ ಶ್ರದ್ಧೆಗಳಿಂದ

ಕಲಿತು ಜೊತೆಗೆ 'ಸಾಧನೆ' ಮಾತ್ರದಿಂದ ಆ 'ಕಲಾಸಿದ್ಧಿ' ಪಡೆಯಬಹುದು. ಅಧೀರರಾಗದೆ ಕಾಯುವ 'ತಾಳ್ಮೆ'– 'T' ಅತ್ಯಗತ್ಯ.

ಇನ್ನು ಮೂರನೆಯದಾಗಿ 'ಜಾಣ್ಮೆ' 'J'. ಅದೇನೆಂದರೆ ಕೇಳ್ಮೆ–ತಾಳ್ಮೆ (K.T) ಇಂದ ಪಡೆದ ಕಲಾಜ್ಞಾನವನ್ನು ಅಹಂಕಾರ ಬಿಟ್ಟು ಆರಾಧನೆ ಮಾಡುವ ಮಾರ್ಗ ಅತ್ಯುತ್ತಮ ಎಂಬುದೇ K.T.J. ಅಥವಾ 'ಕೇಳ್ಮೆ–ತಾಳ್ಮೆ–ಜಾಣ್ಮೆ' ಎಂಬ ಈ ಸೂತ್ರವನ್ನು ಪಾಲಿಸಿಕೊಂಡು ಅಳವಡಿಸಿಕೊಂಡಿದ್ದರ ಫಲವೇ ಈ 'ಅಧ್ಯಕ್ಷ ಪದವಿ' ಎಂಬುದು ನನ್ನ ಪ್ರಾಮಾಣಿಕ ಅನಿಸಿಕೆ. ನನ್ನ ಒಡನಾಟದ ಎಲ್ಲಾ ಸಾಧಕರು ನನಗೆ ಕಲಿಸಿದ ಪಾಠ. ಇದು ನನಗೆ ನಿತ್ಯ ನಿರಂತರ. ಆ ತ್ರಿಸೂತ್ರವನ್ನೇ ಸಾಧನಾಪಥದಲ್ಲಿ ಸಾಗುತ್ತಿರುವ ಎಲ್ಲಾ ಕಿರಿಯರಿಗೂ (ಈ ಕಿವಿಯ ಮಾತನ್ನು) ವರ್ಗಾಯಿಸುತ್ತಿದ್ದೇನೆ ಅಷ್ಟೆ.

ಒಬ್ಬ ಹವ್ಯಾಸಿ ವೀಣಾವಾದಕನಾಗಿ, ಸಂಗೀತ ಶಾಸ್ತ್ರಜ್ಞನಾಗಿ, ಸಾಹಿತ್ಯ ಬರಹಗಾರನಾಗಿ, ಆಧ್ಯಾತ್ಮದ ಒಲವು ಇತ್ಯಾದಿಗಳಿಂದ ಕಲಿತ ಪಾಠ ಅನೇಕ–ಅಪಾರ, ಅವುಗಳಲ್ಲಿ ಕೆಲವು ವಿಚಾರಗಳನ್ನು ತಮ್ಮ ಮುಂದೆ ನಿವೇದಿಸುತ್ತೇನೆ. ಎಲ್ಲರಿಗೂ ಗೊತ್ತು. ಆಹಾರ, ಬಟ್ಟೆ, ವಸತಿ ಅತಿ ಮುಖ್ಯ. ಹಾಗೆಯೇ ಆರೋಗ್ಯವೇ ಭಾಗ್ಯ. ಅಂದರೆ ಆರೋಗ್ಯ–ನೆಮ್ಮದಿ. 'ಆ–ನೆ' ಎಂಬುದು. ಈ ಎಲ್ಲಾ ವಿಚಾರಗಳನ್ನು ವಿವಿಧ ಸ್ತರಗಳಲ್ಲಿ ವಚನಕಾರರು, ದಾಸವರೇಣ್ಯರು, ಸಂತಶ್ರೇಷ್ಠರು, ಸಂಗೀತ ತ್ರಿಮೂರ್ತಿಗಳು ಹೀಗೆ ಅನೇಕ ಅನುಭಾವಿಗಳು ಕಾಲಕಾಲಕ್ಕೆ ತಕ್ಕ ಹಾಗೆ ತಮ್ಮ ಕೃತಿಗಳ ರಚನೆಗಳ ಸಂದರ್ಭಗಳಲ್ಲಿ, ತಿಳಿಸುವುದರ ಜೊತೆಗೆ ನವವಿಧಭಕ್ತಿ, ನವರಸಗಳ ಹೂರಣವನ್ನು ಉಣಬಡಿಸಿದ್ದಾರೆ. ಅಂತಹ ಅಮೂಲ್ಯ ಜ್ಞಾನ ಭಂಡಾರವನ್ನು ತಾವು ಕಂಡ ಸತ್ಯದೊಂದಿಗೆ ತತ್ತ್ವಪ್ರತಿಪಾದನೆ ಮೂಲಕ ತಿಳಿಸಿ ಅಮರರಾಗಿರುವವರು ಅನೇಕರಿದ್ದಾರೆ. ಇವೇ ಈ Fast Age ಯುಗಕ್ಕೆ ತಳಹದಿಯಾಗಿರುವ ತವನಿಧಿ.

ಎಷ್ಟರಮಟ್ಟಿಗೆ ನಾವುಗಳು ಆ ಸಾಧಕರ ಸ್ವತ್ತನ್ನು ಅಭಿವೃದ್ಧಿಪಡಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸಬಹುದು ಎಂಬುದೇ ನಮ್ಮೆಲ್ಲರ ಗುರಿಯಾಗಲು ಪ್ರಯತ್ನಿಸೋಣ. ಕಲೆ–ಸಂಸ್ಕೃತಿ ನಿಂತ ನೀರಲ್ಲ. ಒಂದು ದೇಶದ ನಾಗರಿಕತೆಯನ್ನು ಅಳೆಯುವ ಸಾಧನ ಮಾಪನ – 'ಕಲೆ ಸಂಸ್ಕೃತಿ'. ನಮ್ಮ ಈ ಹೆಮ್ಮೆಯ ಭಾರತ ದೇಶದ ಹಿರಿಮೆಗಾಗಿ ವಿವಿಧ ಸ್ತರಗಳಲ್ಲಿ ಎಲ್ಲಾ ಭಾಷಿಗರೂ, ಧಾರ್ಮಿಕರೂ ಒಟ್ಟಾಗಿ ಸೇರಿ ಈ ಸಾಂಸ್ಕೃತಿಕ ಜಗನ್ನಾಥನ ತೇರನ್ನು ಎಳೆಯೋಣ–ಬೆಳೆಸೋಣ.

ನಾವೆಲ್ಲಾ ಈ Computer, Robot, Global Village, 5G, ಗೂಗ್ಲಾಚಾರ್ಯ, Internet, Work from Home ಇತ್ಯಾದಿಗಳ ಕಾಲಮಾನದಲ್ಲಿದ್ದೇವೆ. ಇವುಗಳಿಗೆಲ್ಲಾ ನಾವೆಲ್ಲರೂ ಹೇಗೆ ಹೊಂದಿಕೊಂಡು ಸ್ಪಂದಿಸಬೇಕೆಂಬುದನ್ನು ಇಡೀ ಪ್ರಪಂಚಕ್ಕೆ ಕರೋನಾ ಎಂಬ ಮಹಾಮಾರಿ ಕಲಿಸಿದೆ. ಈ ಪಾಠ–ಕಲಾಸಂಸ್ಕೃತಿ ಪರಿಚಾರಿಕರಾದ ನಾವು ಗೌರವಿಸಿ ಮುನ್ನಡೆಯಬೇಕೆಂಬುದೇ ಮುಖ್ಯ ಗುರಿಯಾಗಿರಿಸಿಕೊಳ್ಳೋಣ.

ನಮ್ಮ ಕಲೆಯ ತೌರೂರಾದ ಮೈಸೂರಿನಲ್ಲಿ ಅನೇಕ ಕಲಾ ಸಂಸ್ಥೆಗಳಿವೆ. ಆದರೆ ಈ ರೀತಿ ರಾಷ್ಟ್ರಮಟ್ಟದ 26 ಸಂಗೀತ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿ, ಕಲಾದೇವಿಯ ಆರಾಧನೆ ಮಾಡುತ್ತಿರುವ ಏಕೈಕ ಮಹಾಸಂಸ್ಥೆ ನಮ್ಮೆಲ್ಲರ ಹೆಮ್ಮೆಯ 'ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್' ಎಂಬುದು ಅತಿಶಯೋಕ್ತಿ ಅಲ್ಲ. ನನ್ನನ್ನು ಈ ಸಮ್ಮೇಳನದ ಅಧ್ಯಕ್ಷನನ್ನಾಗಿ ಆರಿಸಿದ್ದೀರಿ ಸರಿ. ಆದರೆ ನಾನು ಈ ಮುಂಚೆ ಹಲವಾರು ಸ್ತರಗಳಲ್ಲಿ ಶ್ರೀ ಸ್ವಾಮೀಜಿಗಳ ಆಶೀರ್ವಾದದಿಂದ ಒಬ್ಬ ಸಭೆಯ ಸದಸ್ಯನಾಗಿ, ಸಂಗೀತ ಸ್ಪರ್ಧೆಯ ಆಯೋಜಕನಾಗಿ ಹಲವಾರು ರೂಪಕಗಳು, ಉಪನ್ಯಾಸ, ಲೇಖನ, ಸಮನ್ವಯಕಾರ, ಸಮ್ಮೇಳನದ ಸನ್ಮಾನ, ಸಮಾರೋಪ ಭಾಷಣ ಈ ರೀತಿ ಹತ್ತು ಹಲವು ಅವಕಾಶಗಳು ದೊರಕಿರುವುದು ನನ್ನ ಪೂರ್ವ ಪುಣ್ಯ. ಈಗ ಸಂಗೀತ ಸಭೆಯ 27ನೇ ಸಮ್ಮೇಳನದ ಅಧ್ಯಕ್ಷತೆಯನ್ನು ನನಗೆ ವಹಿಸಿದೆ. ಇದನ್ನು ನಿರ್ವಹಿಸಲು ಸ್ವಾಮೀಜಿಯವರು ಮತ್ತು ಎಲ್ಲಾ ಗುರುಹಿರಿಯರ ಆಶೀರ್ವಾದ ಅತ್ಯಗತ್ಯ

ಮತ್ತೊಂದು ಮುಖ್ಯ ವಿಷಯ. ಈ ರೀತಿ ಸಂಗೀತ ಸಮ್ಮೇಳನದ ಕಲ್ಪನೆ ರಾಜ್ಯ ಸಂಗೀತ ವಿದ್ವಾನ್ ಪಿಟೀಲು ಮಾಂತ್ರಿಕರಾದ ಶ್ರೀ ಎಸ್. ಮಹದೇವಪ್ಪನವರದು. ಇದು ಆ ಮಹಾಮಹಿಮರ 'ಕನಸಿನ ಕೂಸು'. ನನಗೆ ಶ್ರೀಮಠ

ಕರುಣಿಸಿರುವ ಈ ಪದವಿ ನಾದಲೋಕದ ನಾದನಿಧಿ ಶ್ರೀ ಮಹದೇವಪ್ಪನವರ ಆಪ್ತ ಕಿರಿಯ ಮಿತ್ರನಾಗಿ ಆಶೀರ್ವಾದ ಎಂದು ಪರಿಗಣಿಸಿ, ಅನುಸರಿಸಬೇಕಾದದ್ದು ನನ್ನ ಆದ್ಯ ಕರ್ತವ್ಯ.

ನನ್ನ ಅತ್ಯಂತ ಆತ್ಮೀಯರಾದ ಅವರ ಪುತ್ರರಾದ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿ ಮೈಸೂರಿನ ಹೆಮ್ಮೆಯ ಗರಿಗಳಾಗಿರುವ ಮೈಸೂರು ಎಂ. ನಾಗರಾಜ್, ಮೈಸೂರು ಡಾ. ಎಂ. ಮಂಜುನಾಥ್ ಅವರ ಪ್ರೀತಿ ವಾತ್ಸಲ್ಯಗಳು, ಪರಮಪೂಜ್ಯ ಸ್ವಾಮೀಜಿಗಳ ಕೃಪೆ, ಆಶೀರ್ವಾದಗಳಿಂದ ಈ ಸಂಗೀತ ಸಮ್ಮೇಳನವನ್ನು ಅದ್ದೂರಿಯಾಗಿ ನಡೆಸಲು ಅವರು ಸಹಧರ್ಮಿಗಳೊಡನೆ ಮುಂದಾಳುಗಳಾಗಿದ್ದಾರೆ. ಅವರೆಲ್ಲರ ಫಲಾನುಭವಿ ಆಗಿರುವುದು ನನ್ನ ಸೌಭಾಗ್ಯ.

ತಮಗೆಲ್ಲಾ ಅನಿಸಬಹುದು ಏನಿದು? ಈ ರೀತಿ ಅಧ್ಯಕ್ಷ ಭಾಷಣ– ಸಾಂಪ್ರದಾಯಿಕವಾಗಿ ಹಿಂದಿನ ಹಿರಿಯರು ಮಾಡಿದಂತಿಲ್ಲ ಎಂದು. ಆ ಎಲ್ಲಾ 'ಎಂದರೋ ಮಹಾನುಭಾವರುಗಳು' ಅನೇಕ ಅಮೂಲ್ಯ ವಿಚಾರಗಳನ್ನು ತಮ್ಮ ಅಧ್ಯಕ್ಷ ಭಾಷಣಗಳಲ್ಲಿ ಮೂಡಿಸಿದ್ದಾರೆ. ಅದು ಚರ್ವಿತಚರ್ವಣವಾಗದಿರಲಿ ಎಂಬುದು ಈ ಭಾಷಣದ ಹೊಸ ಸ್ವರೂಪ. ತಪ್ಪಿದ್ದರೆ ಕ್ಷಮಿಸಿ ತಿದ್ದಿಕೊಳ್ಳುತ್ತೇನೆ.

ಶ್ರೀ ಶಿವರಾತ್ರೀಶ್ವರರ ಕೃಪೆ ನಮಗೆಲ್ಲಾ ಸದಾ ಇರಲಿ ಎಂದು ಭಕ್ತಿಪೂರ್ವಕವಾಗಿ ಪ್ರಾರ್ಥಿಸಿ ಮುಗಿಸುತ್ತಿದ್ದೇನೆ. ದಯವಿಟ್ಟು ಈ 5 ದಿನದ 27ನೇ ಸಂಗೀತ ಸಮ್ಮೇಳನ ಮತ್ತೊಂದು ಹೊಸ ಮೈಲಿಗಲ್ಲಾಗಲಿ, ನಾನೊಬ್ಬ ನಿಮಿತ್ತ ಮಾತ್ರ. ಮತ್ತೊಮ್ಮೆ ಪೂಜ್ಯ ಸ್ವಾಮೀಜಿಯವರ ಆಶೀರ್ವಾದ ದೊರಕಲಿ, ಜೊತೆಗೆ ಸಂಗೀತ ಸಭೆಯ ಎಲ್ಲಾ ಸದಸ್ಯ ಮಿತ್ರರು ತಮ್ಮಂತಹ ಸುಸಂಸ್ಕೃತ ಶ್ರೋತೃಗಳು ಹೆಚ್ಚಾಗಿ ಭಾಗವಹಿಸಿ ಸಂಗೀತ ಸಮ್ಮೇಳನ ಯಶಸ್ವಿಯಾಗಲು ಸಹಕರಿಸುತ್ತೀರಾ ಎಂಬ ಸಕಾರಾತ್ಮಕ ಮನೋಭಾವನೆಗಳಿಂದ ಈ ಪದವಿಯನ್ನು ನಿರ್ವಹಿಸುತ್ತೇನೆ.

ಈ ಪ್ರಚಾರಯುಗದಲ್ಲಿ ಶ್ರೋತೃಗಳು ಅಲ್ಲದೆ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮಿತ್ರರುಗಳ ಸಹಭಾಗಿತ್ವ ಅತಿಮುಖ್ಯ. ಈ ಎಲ್ಲಾ ಸಹಾಯಹಸ್ತಗಳು ನನ್ನೊಡನೆ ಕೈಗೂಡಿಸಿ 27ನೇ ಸಂಗೀತ ಸಮ್ಮೇಳನದ ಯಶಸ್ಸು ಹೆಚ್ಚಿಸೋಣ ಎಂದು ಆಶಿಸುತ್ತೇನೆ.



ಅಮೆರಿಕದಲ್ಲಿ ನೆಲೆಸಿರುವ ಶ್ರೀಮಠದ ಭಕ್ತರಾದ ಶ್ರೀಮತಿ ಉಮಾ ಇಟಗಿರವರು ತಮ್ಮ ತಾಯಿಯವರಾದ ಶ್ರೀಮತಿ ರುದ್ರಮ್ಮರವರ ಹತ್ತನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಸುತ್ತೂರು ವಸತಿ ಶಾಲೆಯ ಸಹಸ್ರಾರು ಮಕ್ಕಳಿಗೆ ವಿಶೇಷ ಪ್ರಸಾದವನ್ನು ಏರ್ಪಡಿಸಿದ್ದರು.



ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ರಾಜ್ಯಮಟ್ಟದ ವುಶು ಕ್ರೀಡೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಕು. ಡಿ.ಎನ್. ಅಕ್ಷತರವರನ್ನು ಕಾಲೇಜಿನಲ್ಲಿ ನಡೆದ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಆರ್. ಮೂಗೇಶಪ್ಪರವರು ಸನ್ಮಾನಿಸಿ ಅಭಿನಂದಿಸಿದರು.



ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಕು. ಟಿ. ನಿರೀಕ್ಷರವರು ಕೆಎಸ್‌ಸಿಎಯ ಅಭ್ಯಾಸ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಪ್ರಶಂಸನಾ ಪತ್ರ ಸ್ವೀಕರಿಸುತ್ತಿರುವುದು.

## ಶ್ರೀ ಸಿದ್ಧೇಶ್ವರ ಸ್ವಾಮಿಗಳವರಿಗೆ ನುಡಿನಮನ



ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಗೌರವ ಸೂಚಿಸಲಾಯಿತು. ಕಾರ್ಯದರ್ಶಿಗಳು, ಕಾರ್ಯನಿರ್ವಾಹಕ ಕಾರ್ಯದರ್ಶಿಗಳು, ನಿರ್ದೇಶಕರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗದವರಿದ್ದಾರೆ

ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಲಿಂಗೈಕ್ಯರಾದ ಹಿನ್ನೆಲೆಯಲ್ಲಿ ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ದಿನಾಂಕ 3.1.2023ರಂದು ಶ್ರದ್ಧಾಂಜಲಿ ಸಲ್ಲಿಸಿ, ಗೌರವ ಸೂಚಿಸಲಾಯಿತು.

ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್ ರವರು ಶ್ರೀಮಠದೊಂದಿಗೆ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಒಡನಾಟವನ್ನು ಸ್ಮರಿಸಿದರು. ವಿಜಯಪುರ ಜ್ಞಾನಯೋಗಾಶ್ರಮ ಮತ್ತು ಸುತ್ತೂರು ಶ್ರೀಮಠಗಳ ಅವಿನಾಭಾವ ಸಂಬಂಧವನ್ನು ಹೊಂದಿವೆ. ಅವರ ದರ್ಶನಕ್ಕಾಗಿ ಸೇರಿರುವ ಅಪಾರ ಜನಸ್ತೋಮವೇ ಶ್ರೀಗಳ ಮೇಲಿಟ್ಟಿದ್ದ ಭಕ್ತಿ–ಗೌರವಕ್ಕೆ ಸಾಕ್ಷಿ. ಇತರರ ಬಗ್ಗೆ ಅಪಾರ ಕಾಳಜಿ, ಪ್ರೀತಿ ಹೊಂದಿದ್ದರು. ಜೆಎಸ್‌ಎಸ್ ಗ್ರಂಥಮಾಲೆಯಿಂದ ಅವರ ಹಲವಾರು ಮೌಲಿಕ ಕೃತಿಗಳು ಪ್ರಕಟವಾಗಿವೆ. ಸುತ್ತೂರಿನಲ್ಲಿ ಅವರು ಪ್ರತಿ ವರ್ಷವೂ ಪ್ರವಚನ ನೀಡುತ್ತಿದ್ದರು ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಮತ್ತು ಶ್ರೀ ಕೆ.ಆರ್. ಸಂತಾನಂರವರು ಮಾತನಾಡಿದರು. ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿವರ್ಗದವರು ಎರಡು ನಿಮಿಷ ಮೌನಾಚರಣೆ ಮಾಡಿ, ಪೂಜ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ಬಯಲ ಜೀವನ, ಬಯಲ ಭಾವನೆ
ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ

**ಅಲ್ಲಮಪ್ರಭು**

# ಶ್ರದ್ಧಾಂಜಲಿ



ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಆಡಳಿತ ವಿಭಾಗದಲ್ಲಿ 1988–2014 ಸೇವೆ ಸಲ್ಲಿಸಿದ್ದ ಶ್ರೀ ಹೆಚ್.ಎಸ್. ಪುಟ್ಟಪ್ಪನವರು ದಿನಾಂಕ 1.1.2023ರಂದು ದೈವಾಧೀನರಾದರು. ಈ ಹಿನ್ನೆಲೆಯಲ್ಲಿ 2.1.2023ರಂದು ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಶ್ರದ್ಧಾಂಜಲಿ ಸಲ್ಲಿಸಿ ಗೌರವ ಸೂಚಿಸಲಾಯಿತು.

ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕರಾದ ಶ್ರೀ ಶಂಕರಪ್ಪನವರು ಮಾತನಾಡಿ, ಸಂಸ್ಥೆ, ಶ್ರೀಮಠದ ದಾಖಲೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿ, ಅದನ್ನು ಕಾಪಾಡುವಲ್ಲಿ ಶ್ರೀ ಹೆಚ್.ಎಸ್. ಪುಟ್ಟಪ್ಪನವರು ಶ್ರಮವಹಿಸಿದ್ದಾರೆ. ನಮ್ಮ ಕಚೇರಿಯಲ್ಲಿ ಹಿಂದಿನ ಎಲ್ಲಾ ಪತ್ರಗಳು ಇಂದಿಗೂ ಲಭ್ಯವಾಗುವುದಕ್ಕೆ ಕಾರಣ ಶ್ರೀ ಹೆಚ್.ಎಸ್. ಪುಟ್ಟಪ್ಪನವರು. ಸರಳ–ಸಜ್ಜನಿಕೆಯ ವ್ಯಕ್ತಿ ಇವರಾಗಿದ್ದು, ಇತರರಿಗೆ ಮಾದರಿಯಾಗಿದ್ದರು. ತಮ್ಮ ಮೊಮ್ಮಕ್ಕಳ ಶಿಕ್ಷಣಕ್ಕೆ ಸಾಕಷ್ಟು ಶ್ರಮವಹಿಸಿದ್ದು, ತಮ್ಮ ಸರ್ಕಾರಿ ಸೇವೆಯ ನಂತರವೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಆಡಳಿತ ವಿಭಾಗದಲ್ಲಿ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಶ್ರೀ ಹೆಚ್.ಎಸ್. ಪುಟ್ಟಪ್ಪನವರ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲಿ ಎಂದು ತಿಳಿಸಿದರು.


ದಿವಂಗತ ಶ್ರೀ ಹೆಚ್.ಎಸ್. ಪುಟ್ಟಪ್ಪನವರ ಬಗ್ಗೆ ಮಾತನಾಡಿದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು, ಶ್ರೀ ಹೆಚ್.ಎಸ್. ಪುಟ್ಟಪ್ಪನವರು ಸ್ವಯಂ ಶಿಸ್ತು ರೂಢಿಸಿಕೊಂಡು ಜೀವನ ನಡೆಸಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಇಂದಿಗೂ ಹಳೆಯ ದಾಖಲೆಗಳು ನಮಗೆ ಸಿಗುವ ಹಾಗೆ ನಿರ್ವಹಿಸಿದ್ದಾರೆ, ಅವರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ತಿಳಿಸಿದರು.

ಶ್ರದ್ಧಾಂಜಲಿ ಸಭೆಯಲ್ಲಿ ಶ್ರೀ ಹೆಚ್.ಎಸ್. ಪುಟ್ಟಪ್ಪರವರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಎಲ್ಲ ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ
ಕೂಡಲಸಂಗಮದೇವಾ

**ಬಸವಣ್ಣ**

## ಸ್ಮರಣೆ



ದಿವಂಗತ ಶ್ರೀ ಜಿ. ಷಣ್ಮುಖರವರು ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಆರ್ಥಿಕ ನಿಯಂತ್ರಣಾಧಿಕಾರಿಗಳಾಗಿ ಬೆಂಗಳೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಕಾಲೇಜಿನಲ್ಲಿ ಮುಖ್ಯ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 23.9.1926ರಲ್ಲಿ ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಜನಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿಎ ಪದವಿ ಶಿಕ್ಷಣ ಪಡೆದರು. 1948ರಲ್ಲಿ ಮಹಾ ಲೇಖಪಾಲರ ಕಛೇರಿಯಲ್ಲಿ ಸೆಕ್ಷನ್ ಆಫೀಸರ್ ಆಗಿ ಸೇವೆಗೆ ಸೇರಿದರು. ನಂತರ ಅಕೌಂಟ್ಸ್ ಆಫೀಸರ್ ಆಗಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ, 1984ರಲ್ಲಿ ಡೆಪ್ಯೂಟಿ ಅಕೌಂಟೆಂಟ್ ಜನರಲ್ ಆಗಿ ಸೇವೆಸಲ್ಲಿಸಿ ನಿವೃತ್ತಿ ಹೊಂದಿದರು.

ನಿವೃತ್ತಿಯ ನಂತರ 19.11.1984ರಂದು ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಆರ್ಥಿಕ ನಿಯಂತ್ರಣಾಧಿಕಾರಿಗಳಾಗಿ ಸೇವೆಯನ್ನು ಆರಂಭಿಸಿ, ಕರ್ತವ್ಯ ನಿರ್ವಹಿಸಿ 30.6.2012ರಂದು ಸೇವೆಯಿಂದ ಬಿಡುಗಡೆ ಹೊಂದಿದ್ದರು.

ಬಳಿಕ ಬೆಂಗಳೂರಿನಲ್ಲಿ ವಾಸ್ತವ್ಯವಿದ್ದರು. ಅವರ ಸೇವೆಯನ್ನು ಬಳಸಿಕೊಳ್ಳಬೇಕೆಂಬ ಸದುದ್ದೇಶದಿಂದ ಬೆಂಗಳೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಕಾಲೇಜಿನಲ್ಲಿ ಮುಖ್ಯ ಆಡಳಿತಾಧಿಕಾರಿಗಳಾಗಿ 2014ರಲ್ಲಿ ಮರುನೇಮಕ ಮಾಡಿಕೊಳ್ಳಲಾಯಿತು. ಸುಮಾರು ಆರು ವರ್ಷಗಳ ಕಾಲ ಅಲ್ಲಿ ಕಾರ್ಯನಿರ್ವಹಿಸಿದರು. ಅನಂತರ ವಯೋಸಹಜವಾದ ಆರೋಗ್ಯದ ಸಮಸ್ಯೆಯ ಕಾರಣದಿಂದಾಗಿ 11.1.2020ರಂದು ಸೇವೆಯಿಂದ ಬಿಡುಗಡೆ ಹೊಂದಿದರು.

ಶ್ರೀ ಜಿ. ಷಣ್ಮುಖರವರು ಸುಮಾರು ಮೂರೂವರೆ ದಶಕಗಳಿಗಿಂತ ಹೆಚ್ಚು ಕಾಲ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದರು. ಮೃದು ಸ್ವಭಾವದವರಾಗಿದ್ದು, ಸಹೋದ್ಯೋಗಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಸುದೀರ್ಘ ಕಾಲ ಸಲ್ಲಿಸಿದ ಇವರ ಸೇವೆ ಹಾಗೂ ಇಳಿವಯಸ್ಸಿನಲ್ಲಿಯೂ ಸಂಸ್ಥೆಗೆ ಸೇವೆ ಸಲ್ಲಿಸಬೇಕೆಂಬ ಅವರ ಉತ್ಸಾಹ ಮಾದರಿಯಾದುದು. □



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 7.12.2022ರಂದು ನಡೆದ 249ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಜಿ.ಕೆ. ಮನಮೋಹನ್ ಗಾಯನ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ಎ. ರಾಧೇಶ್ ಹಾಗೂ ವಿದುಷಿ ಸಿ.ವಿ. ಶ್ರುತಿರವರುಗಳಿದ್ದಾರೆ.

## Student Skill Development Programme

Students have to not only obtain degrees but also have to acquire multi-task knowledge to get prioritized by the employer. The faculty has shall the most value- based and skill-based education for the students. The students have to be very clear and transparent in communication skills. Sri Utsav Agarwal, Director, Bhoruka Fabcons Pvt. Ltd., addressed the students of **JSS College of Arts, Commerce & Science, B.N. Road, Mysuru** in the inaugural programme of the Industry-Institute Interaction and Students Skill Development Programme organized by the Internal Quality Assurance Cell of the College. The Association with Confederation of Indian Industries-Industry Institute Interaction Panel (CII-III), Mysuru Zone was the co-sponsor of the event held on 17.12.2022. Sri Agarwal called upon the students to have a positive mindset, hard working and converting ideas into projects and always to keep updating their skills.

Sri Santosh Gundapi, Managing Director, AT&S India Pvt. Ltd., Mysuru delivered the keynote address. He advised the students to pick the best out of the choice for studies as per their individual ability and right of learning. He felt the necessity of obtaining the education with good attitude, creativity, passion of learning, and fearless exposure. He also suggested the students to be bold and self-confident and emphasized about greater need for MoUs between Industries and Institutes.

Prof. B.V. Sambashivaiah, Chief Executive, in his presidential remarks, said that the students should make best use of opportunities provided through such programmes. He mentioned about the initiatives taken up by the Central and State Governments to enhance the skilled graduates.

Prof. M.P. Vijayendra Kumar, Principal, welcomed the guests, dignitaries and others. Smt. Radhika Hardikar rendered invocation. Dr. N. Rajendraprasad, IQAC Coordinator, proposed Vote of Thanks. Dr. Prakash, Placement officer compered the event.

About 50 teachers and 500 students participate in the programme.

The wealthy make temples for Shiva.
I am poor, Lord, what can I make?
My legs are pillars,
my body the shrine,
my head the golden dome, Lord.
Kudala Sangama Deva, listen!
what stands still is destroyed;
what moves is never destroyed.

# Sports Meet Held




The 29th Annual Sports Meet and CCA Prize Distribution - SPARKS - was held on 16.12.2022 at **JSS Public School, Malur**.

Smt. H S Chandrakala, BEO, Malur was the Chief Guest. In her address, she urged specially the students of Grade X how to learn time management.

The Meet was presided over by Sri S.H. Maheshwarappa, Co-ordinator of JSS Educational Institutions, Malur who expressed anguish over the consequences of indiscreet use of mobile phones where students are getting addicted and ruin their future. He advised the parents to take care about their wards in this behalf and help them to mould the students as responsible citizens.

The administration of Sports Oath and Annual Report were presented by Sri L. Munikrishnappa, Principal. Prizes for Sports and CCA winners were given away by the dignitaries. There was an inspiring March Past from all the Four Houses, viz., Red Ruby, Yellow Topaz, Emerald Green and Sapphire Blue. Lezim-Dumble Display and Folk Dance were the Centre of attraction on the occasion.

## Accolades in sports & games



Karnataka State Federation of the Deaf organized the 12th Karnataka State Games of the Deaf at Belagavi from 6.12.2022 to 8.12.2022. 39 students of **JSS Polytechnic for the Differently Abled, Mysuru** participated in various sports and games and won prizes as follows:

Ms. Agnes Jose, I Sem CS : I Prize in Long Jump, II Prize in 200 Mtrs. Running race. Ms. Sowmya Navi, I Sem JDT : I Prize in High Jump, III Prize in 100 Mtrs. Running.

Ms. Gangireddi Ankitha, V Sem CS : II Prize in 100 Mtrs. Running, III Prize in 200 Mtrs. Running.

Ms. Narasapuram Manasa, V Sem CS : II Prize in Shot put, III Prize in Discuss throw. Ms. Gayathri, V Sem CS : II Prize in High Jump

Ms. Monisha, III Sem AR : I Prize in Shuttle Badminton Ms. Disha, III Sem CS : II Prize in Shuttle Badminton

Ms. Sukshitha, V Sem CS : III Prize in Shuttle Badminton

Mr. Prathamesh, I Sem EC : I Prize in 100 Mtrs. Running (Junior)

Mr. Sayed Zabiulla, V Sem CS : III Prize in Javelin, III Prize in High Jump Junior & III Prize in Long Jump

Mr. Narendra Kumar, III Sem EC : III Prize in 200 Mtrs. Running Mr. Gokul, V Sem EC : I Prize in High Jump

Mr. Lingutla Ravi Kiran, V Sem CS : II Prize in High Jump Mr. Mallesh, III Sem AR : I Prize in 100 Mtrs. Running Mr. Shivakumar, III Sem CS : III Prize in Shot put

Mr. Vijay Kumar Kori, III Sem EC : II Prize in Shot put (Junior)

4x400 Relay Junior Boys won I Prize; 4x100 Relay Senior Girls : I Prize; 4x400 Relay Senior Boys : I Prize; 4x100 Relay Senior Boys : II Prize, Volley Ball Junior Boys : won I Prize and Volley Ball Senior Boys : II Prize.

# Inter School Drawing Competition



**JSS Public School, Teachers' Layout, Mysore** organized an Inter-School Drawing Competition 2022-23 with the theme 'Save the Ozone Layer or Cultural Diversity of India' on 15.12.2022. All the participants expressed their creativity and unbridled imagination through the palette of colours.

Master L. Thrinesh, Captain of Agni House, welcomed all the participants.

Ten schools participated in the competition:

As follows :

1. JSSPS Teachers' Layout
2. JSSPS, JC Campus
3. JSSPS, J P Nagar
4. JSSPS, Siddhartha Nagar
5. JSS, Lakshmipuram
6. JSS, Saraswathipuram
7. JSS, Balajagath
8. JSS, Metagalli
9. St. Arnold Central School , Mysuru
10. Mahaveer Jain Public School, Mysuru

Smt. M. Asha, Principal thanked the participants, mentors and the schools for their active participation in the event. It was indeed a spectacular display of talent and fervor. All the students who attended the competition were awarded Participation Certificate.

## JSS AHER signs a MOU



A Memorandum of Understanding was signed by the **JSS Academy of Higher Education & Research, Mysuru** and South Kazakhstan Medical Academy, Kazakhstan on 28.11.2022 to work in the area of drug discovery, development of medicinal plants, herbal drugs, neuropharmacology and Nanotherapeutics. The MoU was signed at Kazakhstan, which the first of its kind between the two countries.

South Kazakhstan Medical Academy, established in 1979, involved in teaching and training medical and pharmaceutical specialists in undergraduate, internship, postgraduate, residency and PhD programmes through its 41 departments.

Dr. B. Manjunatha, Registrar and Dr. Vishal Kumar Gupta, Dean (Academics) visited the South Kazakhstan Medical Academy and represented JSS AHER, Mysuru in the MoU signing ceremony.

Dignitaries (L to R):

Shri Vijay Singh, Second Secretary, (Head of Chancery, Education & Community), Embassy of India, Astana, Kazakhstan

Dr. Vishal Kumar Gupta, Dean (Academics), JSS AHER, Mysuru

Prof. Rysbekov Myrzabek Myrzashevich, Rector, South Kazakhstan Medical Academy (SKMA), Shymkent, Kazakhstan

Shri Sanjay Vedi, Director, Swami Vivekananda Cultural Centre, Embassy of India, Astana, Kazakhstan

Dr. Manjunatha B, Registrar, JSS AHER, Mysuru

Other officials of South Kazakhstan Medical Academy (SKMA)

The Chakora1 bird pines
for the moon's light;
the lotus pines
for the rising sun;
the bee pines
for the honey taste of flowers;
I pine, Kudala Sangama Deva,
for your remembrance.



ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿವದೀಪೋತ್ಸವದ ಅಂಗವಾಗಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಗೆ ವಿಶೇಷ ದೀಪಾಲಂಕಾರ ಮಾಡಲಾಗಿತ್ತು. ಸಾವಿರಾರು ಭಕ್ತಾದಿಗಳು ಭಾಗವಹಿಸಿದ್ದರು.




ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಶ್ರೀ ರಾಜೇಂದ್ರ ಭವನದಲ್ಲಿ ಆಯೋಜಿಸಿದ್ದ ಶಿವಾನುಭವ ದಾಸೋಹ–296 ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಎಸ್. ಶಿವರಾಜಪ್ಪನವರು ಉಪನ್ಯಾಸ ನೀಡಿದರು. ದಂಡಿಕೆರೆ ಮಠದ ಶ್ರೀ ಬಸವಲಿಂಗ ಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು.

Registered with the Registrar of Newspapers for India No. KARBIL/2014/66470
'JSS Varthapathra' Monthly, Vol. 8, Issue No. 1, January 2023



ದಿನಾಂಕ 30.12.2022ರಂದು ದೈವಾಧೀನರಾದ ಶತಾಯುಷಿ ಶ್ರೀಮತಿ ಹೀರಾ ಬೆನ್‌ರವರ ಅಂತ್ಯಸಂಸ್ಕಾರದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಭಾಗವಹಿಸಿದ್ದರು. ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು, ಅವರ ಸಹೋದರರು ಹಾಗು ಇತರರಿದ್ದಾರೆ.



ಶ್ರೀ ಸುತ್ತೂರು ಕ್ಷೇತ್ರದಲ್ಲಿ ದಿನಾಂಕ 22.12.2022ರಂದು ನಡೆದ ಶ್ರೀ ಶಿವರಾತ್ರೀಶ್ವರರ 1063ನೆಯ ಜಯಂತಿ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜ್ಯೋತಿಷ ಮಹಾಮಹೋಪಾಧ್ಯಾಯ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಸಿದ್ಧಪಡಿಸಿರುವ ಶ್ರೀ ಶುಭಕೃತು ಸಂವತ್ಸರದ ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗ ಮತ್ತು ಶ್ರೀಮಠ ಹಾಗು ಜೆಎಸ್‌ಎಸ್ ಮಹಾವಿದ್ಯಾಪೀಠದ ದಿನಚರಿಗಳನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಮುಕ್ತಿದಾನಂದಜೀ ಮಹಾರಾಜ್, ಡಾ. ಸಿ.ಎನ್. ಮಂಜುನಾಥ್, ಪ್ರೊ. ಎಂ. ಕೃಷ್ಣೇಗೌಡ ಹಾಗೂ ಇತರರಿದ್ದಾರೆ

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ಟವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821–2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
**ಬಿಡಿ ಪ್ರತಿ 10 ರೂ.**